# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 195 Issue: 195 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 05.02.2025 05.02.2025 • ಬುಧವಾರ Wednesday • ಪುಟ:04 Page:04 • ಬೆಲೆ:2 Rs:2



ಓದುಗರ ಬೆರಳ ತುದಿಗೆ ನಿಮ್ಮ ಬ್ರಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.

1,10,000+
Digital E-PAPER READERS



No.1 HAMPI TIMES LEADING VIJAYANAGARA District News Paper

Contact for Advertisements: 9448633038


## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ


-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ


## ಮನೆ ಬಾಡಿಗೆಗೆ ಇದೆ

ಹೊಸಪೇಟೆಯ ವಿವೇಕಾನಂದನಗರದಲ್ಲಿ ಶ್ರೀನಿವಾಸ ಅಪಾರ್ಟ್‌ಮೆಂಟ್ ಎದುರುಗಡೆ, ಸಮರ್ಪಕ (ಸಿಹಿ & ಬೋರ್‌ವೆಲ್) ನೀರಿನ ಸೌಲಭ್ಯ ಇರುವ ಡಬಲ್ ಬೆಡ್‌ರೂಂ ಮನೆ ಬಾಡಿಗೆಗೆ ಇದೆ. ಆಸಕ್ತರು ನೇರವಾಗಿ ಸಂಪರ್ಕಿಸಿ

M: 9909978170
M: 9448867485


## ಆನಂದ ಬಾಣ





ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com


# ವಿಜ್ಞಾನ ಅರ್ಥೈಸಿಕೊಳ್ಳಲು ಚಿತ್ರಸ್ಪರ್ಧೆ ಸಹಕಾರಿ

## ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರಸ್ಪರ್ಧೆ-10ರ ಅತ್ಯುತ್ತಮ ಚಿತ್ರಗಳು। ಎಂ.ಲಕ್ಷ್ಮಿ (ಪ್ರಥಮ), ಕೆ.ಅಶ್ವಿನಿ ಚಿದಾನಂದ (ದ್ವಿತೀಯ), ಎನ್.ಇಂದುಶ್ರೀ (ತೃತೀಯ)

■ **ಹಂಪಿ ಟೈಮ್ಸ್ ಹೊಸಪೇಟೆ**


ಪರೀಕ್ಷೆಗಳಲ್ಲಿ ವಿಜ್ಞಾನದ ಚಿತ್ರಗಳನ್ನು ಬಿಡಿಸಲು ಚಿತ್ರಸ್ಪರ್ಧೆ ಸಹಕಾರಿಯಾಗಿದೆ. ವಿಜ್ಞಾನದ ಕಲಿಕೆಯಲ್ಲಿ ಆಸಕ್ತಿ ಹೆಚ್ಚಿಸಿದೆ ಎಂದು ವಿದ್ಯಾರ್ಥಿಗಳು ಅಭಿಪ್ರಾಯವ್ಯಕ್ತಪಡಿಸಿದರು.

ವಾರ್ಷಿಕ ಪರೀಕ್ಷೆ ಮಕ್ಕಳಲ್ಲಿ ಭಯಹೋಗಲಾಡಿಸಿ, ಸಂಭ್ರಮ ಹೆಚ್ಚಿಸುವ ನಿಟ್ಟಿನಲ್ಲಿ ಹಂಪಿ ಟೈಮ್ಸ್ 10 ವಾರಗಳಿಂದ ಚಿತ್ರಸ್ಪರ್ಧೆ ಏರ್ಪಡಿಸಿರುವುದು ವಿದ್ಯಾರ್ಥಿಗಳು ಸೇರಿದಂತೆ ಶಿಕ್ಷಕರಲ್ಲೂ ಉತ್ಸಾಹ ಇಮ್ಮಡಿಗೊಳಿಸಿದೆ. ಮಕ್ಕಳು ಅತ್ಯುತ್ತಮವಾಗಿ ಚಿತ್ರಬಿಡಿಸುತ್ತಿದ್ದು ಅತ್ಯುತ್ತಮ ಆಯ್ಕೆ ಮಾಡುವುದು ಕಠಿಣ ಸವಾಲಾಗಿದೆ ಎಂದು ಶಿಕ್ಷಕರು ಅಭಿಪ್ರಾಯಪಟ್ಟರು.

ಚಿತ್ರಸ್ಪರ್ಧೆ-10ರ ಬಿಳಿ ಬಣ್ಣದ ರೋಹಿತದ ಪುನರ್ ಸಂಯೋಜನೆಯ ಚಿತ್ರ ಬಿಡಿಸಿ. ಸ್ಪರ್ಧೆಯಲ್ಲಿ ಹೊಸಪೇಟೆ ಬಾ.ಸ.ಪ.ಪೂ.ಕಾಲೇಜ್ ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿನಿ ಎಂ.ಲಕ್ಷ್ಮಿ (ಪ್ರಥಮ), ಹೊಸಪೇಟೆ ತಾಲೂಕಿನ ಕಮಲಾಪುರ ಸ.ಬಾ.ಪ್ರೌಢಶಾಲೆಯ ವಿದ್ಯಾರ್ಥಿನಿ ಕೆ.ಅಶ್ವಿನಿ ಚಿದಾನಂದ (ದ್ವಿತೀಯ) ಹಾಗೂ ಹೊಸಪೇಟೆಯ ಸರ್ಕಾರಿ ಬಾಲಕಿಯರ (ಮಾ.ಪು) ಪ್ರೌಢಶಾಲೆ ವಿದ್ಯಾರ್ಥಿನಿ ಎನ್.ಇಂದುಶ್ರೀ (ತೃತೀಯ) ಸ್ಥಾನ ಪಡೆದಿದ್ದಾರೆ ಎಂದು ಆಯ್ಕೆ ತಂಡದ ಮುಖ್ಯಸ್ಥ ಶಿವತನಯ ಎಸ್.ಸಿ. ತಿಳಿಸಿದ್ದಾರೆ.


ಹ.ಬೊ.ಹಳ್ಳಿಯ 16 ಶಾಲೆ, ಹೊಸಪೇಟೆ ತಾಲೂಕಿನ 13 ಶಾಲೆಗಳು, ಕೊಟ್ಟೂರು-1, ಕೂಡ್ಲಿಗಿ-1, ಹರಪನಹಳ್ಳಿ-1, ಬಳ್ಳಾರಿ-1, ಗದಗ-1 ಶಿವಮೊಗ್ಗ-1 ಜಿಲ್ಲೆಯಿಂದ ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ. ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಹಂಪಿ ಟೈಮ್ಸ್ ಬಳಗ ಅಭಿನಂದಿಸಿದೆ.

>>3







ಎಂ.ಲಕ್ಷ್ಮಿ ಹುಲಿಗೇಶ
(ಪ್ರಥಮ)
ಬಾ.ಸ.ಪ.ಪೂ.ಕಾ,
ಪ್ರೌಢಶಾಲಾ ವಿಭಾಗ,
ಹೊಸಪೇಟೆ.
ಶಿಕ್ಷಕರು-ನಾಗರತ್ನ ಸಿ.ಎಸ್




ಕೆ.ಅಶ್ವಿನಿ ಚಿದಾನಂದ
(ದ್ವಿತೀಯ)
ಸ.ಬಾ.ಪ್ರೌಢಶಾಲೆ, ಕಮಲಾಪುರ
ಶಿಕ್ಷಕರು-ಆರ್.ಕೆ.ರಾಜೇಶ್ವರಿ






ಎನ್.ಇಂದುಶ್ರೀ
(ತೃತೀಯ)
ಸ.ಬಾ.ಪ್ರೌಢಶಾಲೆ
(ಮಾಪು) ಹೊಸಪೇಟೆ
ಶಿಕ್ಷಕರು-ರುಕ್ಸಾನ.ವಿ





### ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರಸ್ಪರ್ಧೆ 11

**ದಿನಾಂಕ: 07-02-2025**

**ಚಿತ್ರ ಬಿಡಿಸುವ ಸ್ಪರ್ಧೆ:**

**ವಿಷಯ:**

R1 R2 R3 ಮೂರು ರೋಧಕಗಳನ್ನು ಸರಣಿ ಕ್ರಮದಲ್ಲಿ ಮತ್ತು ಸಮಾಂತರ ಕ್ರಮದಲ್ಲಿ ಜೋಡಿಸಿರುವ ವಿದ್ಯುತ್ ಮಂಡಲದ ನಕ್ಷೆ ಬಿಡಿಸಿ.

# ಕೂಸಿನ ಮನೆಯ ಮಕ್ಕಳನ್ನು ಮನೆಮಕ್ಕಳಂತೆ ಆರೈಕೆ ಮಾಡಿ

## ತಾಪಂ ಇಒ ಅಪೂರ್ವ ಎ ಕುಲಕರ್ಣಿ ಸಲಹೆ। ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಿ



■ **ಹಂಪಿ ಟೈಮ್ಸ್ ಹರಪನಹಳ್ಳಿ**

ಕೂಸಿನ ಮನೆಗೆ ಬರುವ ಮಕ್ಕಳನ್ನು ತಮ್ಮ ಮಕ್ಕಳಂತೆ ನೋಡಿಕೊಂಡು ಸ್ವಚ್ಛತೆಗೆ ಒತ್ತು ನೀಡುತ್ತ ಪೌಷ್ಟಿಕ ಆಹಾರ ಕಡ್ಡಾಯವಾಗಿ ನೀಡಬೇಕು ಎಂದು ಹರಪನಹಳ್ಳಿ ತಾಪಂನ ಇಒ ಅಪೂರ್ವ ಎ ಕುಲಕರ್ಣಿ ಸೂಚಿಸಿದರು.

ತಾಲೂಕಿನ ಉಚ್ಚಂಗಿದುರ್ಗ ಗ್ರಾಮದಲ್ಲಿ ಭರತ ಹುಣ್ಣಿಮೆ ಹಾಗೂ ಮುಂಬರುವ ಯುಗಾದಿಗೆ ನಡೆಯುವ ಉಚ್ಚಂಗೆಮ್ಮ ಜಾತ್ರೆಯ ಪ್ರಯುಕ್ತ ಮಂಗಳವಾರ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಗೆ ಆಗಮಿಸಿದ್ದ ಇಒ ಅವರು ಕೂಸಿನ ಮನೆಗೆ ದಿಢೀರ್ ಭೇಟಿ ನೀಡಿ ಪರಿಶೀಲಿಸಿ ಮಾತನಾಡಿದರು.

ಕೂಸಿನಮನೆಗೆ ನರೇಗಾ ಕೂಲಿ ಕಾರ್ಮಿಕರ ಮಕ್ಕಳು ಮಾತ್ರ ವಲ್ಲದೆ, ಎಲ್ಲರ ಮಕ್ಕಳು ಬಂದರೂ ಕರೆದು ಕೊಳ್ಳಬೇಕು. ಯಾವುದೇ ತಾರತಮ್ಯ ಮಾಡಬಾರದು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಕೂಸಿನ ಮನೆ ನಡೆಯುತ್ತಿದ್ದು, ಇದನ್ನು ಅರ್ಥಪೂರ್ಣವಾಗಿ ಮುನ್ನಡೆಸಿಕೊಂಡು ಹೋಗಬೇಕು. ಇದರಲ್ಲಿ ಆರೈಕೆದಾರರ ಪಾತ್ರ ಬಹಳ ದೊಡ್ಡದು ಇದೆ. ಮಕ್ಕಳನ್ನು ಉತ್ತಮ ರೀತಿಯಲ್ಲಿ ಕಂಡು ನಲಿ-ಕಲಿ ರೀತಿಯಲ್ಲಿ ಚಟುವಟಿಕೆ ಹಮ್ಮಿಕೊಂಡು ನಿರಂತರ ಕೂಸಿನಮನೆ ನಡೆಸಬೇಕು ಎಂದು ಪಿಡಿಒಗೆ ಸೂಚಿಸಿದರು.

ಕೂಸಿನ ಮನೆಗೆ ಬರುವ 6 ತಿಂಗಳಿಂದ 3 ವರ್ಷದೊಳಗಿನ ಮಕ್ಕಳನ್ನು ಉತ್ತಮ ರೀತಿಯಲ್ಲಿ ಆರೈಕೆ ಮಾಡಬೇಕು. ಮಕ್ಕಳನ್ನು ಆರೈಕೆ ಮಾಡುವಾಗ ತಮ್ಮ ಮಕ್ಕಳಂತೆ ನೋಡಿಕೊಂಡು ಸರ್ಕಾರ ನೀಡುವ ಆಹಾರ ನೀಡಿ ಎಲ್ಲ ಮಕ್ಕಳು ಪೌಷ್ಟಿಕವಾಗಿ ಬೆಳೆಯಬೇಕು ಎಂದರು.

ಇನ್ನು ಕೂಸಿನ ಮನೆಯ ಮುದ್ದು ಮಕ್ಕಳನ್ನು ಕಾರ್ಯನಿರ್ವಾಹಕ ಅಧಿಕಾರಿ ಎತ್ತಿ ಮುದ್ದಾಡಿದ್ದು ಗಮನ ಸೆಳೆಯಿತು. ಈ ಸಂದರ್ಭದಲ್ಲಿ ಪಿಡಿಒ ಪರಮೇಶ್ವರಪ್ಪ, ಗ್ರಾಪಂ ಅಧ್ಯಕ್ಷೆ ಗಂಗಮ್ಮ, ಉಪಾಧ್ಯಕ್ಷ ಎಂ.ಕೆಂಚಪ್ಪ, ತಾಪಂ ಸಿಬ್ಬಂದಿ ದಾದ ಖಲೀಲ್, ಗ್ರಾಪಂ ರಾಜಣ್ಣ, ಎಂ, ದಂಡೆಪ್ಪ ಇತರರಿದ್ದರು.




ಹಂಪಿ ಉತ್ಸವ-2025 ಆಚರಣೆ ಕುರಿತು ವಿಧಾನ ಸೌಧದಲ್ಲಿ ಮಂಗಳವಾರ ಸಚಿವರಾದ ಎಚ್. ಕೆ. ಪಾಟೀಲ್, ಜಮೀರ್ ಅಹಮದ್ ಖಾನ್ ಹಾಗೂ ಶಿವರಾಜ್ ತಂಗಡಗಿ ಅವರ ಸಮ್ಮುಖದಲ್ಲಿ ಸಭೆ ನಡೆಯಿತು. ಶಾಸಕರಾದ ಎಚ್.ಆರ್.ಗವಿಯಪ್ಪ, ಕಂಪ್ಲಿ ಗಣೇಶ್, ಇಲಾಖೆ ಕಾರ್ಯದರ್ಶಿಗಳಾದ ನವೀನ್‌ರಾಜ್ ಸಿಂಗ್, ಮಂಜುಳಾ, ಸಲ್ಮಾ ಫಾಹಿಮ್, ಧರಣಿ ದೇವಿ ಮಾಲಗತ್ತಿ ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಎಸ್ಪಿ ಶ್ರೀಹರಿಬಾಬು, ಜಿಪಂ ಸಿಇಒ ಎನ್.ಎಂ.ಅಕ್ರಂ ಅಲಿ ಷಾ, ಕನ್ನಡ ಮತ್ತು ಸಂಸ್ಕೃತಿ, ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಕರ್ನಾಟಕ ದರ್ಶನ ಮಕ್ಕಳ ಶೈಕ್ಷಣಿಕ ಪ್ರವಾಸ

## ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ಪ್ರಭುಲಿಂಗಪ್ಪ.ಎಸ್.ತಳಕೇರಿ ಚಾಲನೆ

■ **ಹಂಪಿ ಟೈಮ್ಸ್ ಹೊಸಪೇಟೆ**

2024-25 ನೇ ಸಾಲಿನ ಎಸ್‌ಸಿಪಿ, ಟಿಎಸ್‌ಪಿ ಯೋಜನೆಯಡಿ ಪ್ರವಾಸೋದ್ಯಮ ಇಲಾಖೆಯಿಂದ ಕೈಗೊಂಡಿರುವ ಸರ್ಕಾರಿ ಶಾಲಾ ವಿದ್ಯಾರ್ಥಿಗಳ ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮಕ್ಕೆ 149 ವಿದ್ಯಾರ್ಥಿಗಳ ಮೊದಲನೆ ಬ್ಯಾಚ್‌ಗೆ ನಗರದ ಪಟೇಲ್ ಶಾಲೆಯಲ್ಲಿ ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ಪ್ರಭುಲಿಂಗಪ್ಪ.ಎಸ್.ತಳಕೇರಿ ಸೋಮವಾರ ಚಾಲನೆ ನೀಡಿದರು.

ಬಳಿಕ ಅವರು ಮಾತನಾಡಿ, ಪ್ರವಾಸ ಕಾರ್ಯಕ್ರಮಕ್ಕೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ ಇಲಾಖೆಯಿಂದ ಆಕರ್ಷಕ ಬ್ಯಾಗ್, ನೋಟ್ ಬುಕ್, ಟೀ-ಶರ್ಟ್, ಕ್ಯಾಪ್, ಪೆನ್, ಕರ್ನಾಟಕ ಮ್ಯಾಪ್,

>>4




# ಫೆ.6 ರಂದು ಹೊಸಪೇಟೆಯ ವಿವಿಧೆಡೆ ವಿದ್ಯುತ್ ವ್ಯತ್ಯಯ

■ **ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ನಗರದ 33/11 ಕೆವಿ ಉಪ ವಿಭಾಗ-1 ರ 11ಕೆವಿ ವಿದ್ಯುತ್ ವಿತರಣಾ ಕೇಂದ್ರದ ಮಾರ್ಗಗಳಲ್ಲಿ ದುರಸ್ತಿ ಕಾರ್ಯ ಹಮ್ಮಿಕೊಂಡಿರುವುದರಿಂದ ಫೆ.6 ರಂದು ಬೆಳಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.



ನಗರದ ಬಸವೇಶ್ವರ ಬಡಾವಣೆ, ಜಬ್ಬಲ್ ಸರ್ಕಲ್, ಶಾನಭಾಗ ಸರ್ಕಲ್, ರಾಜೀವ ನಗರ, ರೈಲ್ವೆ ಸ್ಟೇಷನ, ಅಮರಾವತಿ, ಚಿತ್ತವಾಡ್ಗಿ, ಶುಗರ್ ಫ್ಯಾಕ್ಟರಿ, ಹಂಪಿ ರೋಡ್, ಗಣೇಶ ಗುಡಿ, ನೌಕರ ಕಾಲೋನಿ, ಗಾಂಧಿ ಸರ್ಕಲ್, ಬಸ್ ಸ್ಟಾಂಡ್, ಮೇನ್ ಬಜಾರ, ಕೋರ್ಟ್, ರಾಣಿಪೇಟೆ, ಭಟ್ರಹಳ್ಳಿ, ಬೆನಕಾಪುರ, ಬಸವನದುರ್ಗ, ನಾಗೇನಹಳ್ಳಿ ಹಾಗೂ ನರಸಾಪುರ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಗೆ ಒಳಪಡುವ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು ಸಾರ್ವಜನಿಕರು ಮತ್ತು ಗ್ರಾಹಕರು ಸಹಕರಿಸಬೇಕೆಂದು ತಿಳಿಸಿದ್ದಾರೆ.

# ಹಂಪಿ ಉತವ - ಕವಿಗೋಷ್ಠಿ ಆಸಕ್ತ ಕವಿಗಳು ನೋಂದಾಯಿಸಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಬರುವ ಹಂಪಿ ಉತ್ಸವ ದಲ್ಲಿ ಶ್ರೀ ವಿರೂಪಾಕ್ಷ ದೇವಸ್ಥಾನದ ವೇದಿಕೆ ಯಲ್ಲಿ ನಡೆಯುವ ಕವಿ ಗೋಷ್ಠಿ, ಮಹಿಳಾ ವಿಚಾರ ಸಂಕಿರಣ ಹಾಗೂ ಯುವ ಕವಿ ಗೋಷ್ಠಿ ಇದರಲ್ಲಿ ಭಾಗವಹಿ ಸುವ ಕವಿಗಳು ಹಾಗೂ ಆಸಕ್ತಿಯುಳ್ಳ ಮಹಿಳೆಯರು ಹಾಗೂ ಯುವ ಕವಿಗಳು ಫೆಬ್ರವರಿ 12 ರೊಳಗೆ ಮೊ. 8105729581 ಈ ಸಂಖ್ಯೆಗೆ ಕರೆ ಮಾಡಿ ನೋಂದಾಯಿಸಿಕೊಳ್ಳಲು ಅವಕಾಶ ನೀಡ ಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




# ಹೆಚ್ಚುವರಿ ಬಡ್ಡಿ ವಿಧಿಸುವ ಲೇವಾದೇವಿ ಸಂಸ್ಥೆಗಳ ವಿರುದ್ಧ ದೂರು ದಾಖಲಿಸಲು ಅವಕಾಶ

## ಹೊಸಪೇಟೆ ಸಹಕಾರಿ ಸಂಘಗಳ ಸಹಾಯಕ ನಿಬಂಧಕರು ಸೂಚನೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಭದ್ರತೆಯ ಸಾಲಗಳಿಗೆ ಗರಿಷ್ಠ ವಾರ್ಷಿಕ ಶೇ.14, ಭದ್ರತೆ ಇಲ್ಲದ ಸಾಲಗಳಿಗೆ ಗರಿಷ್ಠ ಶೇ.16 ರಷ್ಟು ಮಾತ್ರ ಬಡ್ಡಿ ದರವನ್ನು ವಿಧಿಸಲು ಅವಕಾಶ ಇದೆ ಎಂದು ಹೊಸಪೇಟೆ ಸಹಕಾರಿ ಸಂಘಗಳ ಸಹಾಯಕ ನಿಬಂಧಕರು ತಿಳಿಸಿದ್ದಾರೆ.

ಕರ್ನಾಟಕ ಲೇವಾದೇವಿ ಅಧಿನಿಯಮ -1961 ಮತ್ತು ಕರ್ನಾಟಕ ಗಿರವಿದಾರರ ಅಧಿನಿಯಮ-1961 ರಡಿ ಪರವಾನಿಗೆ ಪಡೆದ ಸಂಸ್ಥೆಗಳು ಅಧಿನಿಯಮ 28(1) ರನ್ವಯ ಭದ್ರತೆಯ ಸಾಲಗಳಿಗೆ ಗರಿಷ್ಠ ವಾರ್ಷಿಕ ಶೇ.14 ಮತ್ತು ಭದ್ರತೆ ಇಲ್ಲದ ಸಾಲಗಳಿಗೆ ಗರಿಷ್ಠ ವಾರ್ಷಿಕ ಶೇ.16 ರ ಮಿತಿಯೊಳಗೆ ಬಡ್ಡಿ ದರವನ್ನು ವಿಧಿಸಲು ಮಾತ್ರ ಅವಕಾಶವಿರುತ್ತದೆ. ನಿಗದಿತ ದರಕ್ಕಿಂತಲೂ ಹೆಚ್ಚುವರಿ ಬಡ್ಡಿ ವಿಧಿಸುತ್ತಿರುವ ಸಂಸ್ಥೆಗಳ ವಿರುದ್ಧ ಸಹಕಾರ ಸಂಘಗಳ ಜಂಟಿ ನಿಬಂಧಕರು, ಕಲಬುರಗಿ ಪ್ರಾಂತ, ಕಲಬುರಗಿ- 08532221753, ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಲೇವಾದೇವಿ ನಿಬಂಧಕರು, ಬಳ್ಳಾರಿ 08392272635, ಸಹಕಾರ ಸಂಘಗಳ ಸಹಾಯಕ ನಿಬಂಧಕರು ಲೇವಾದೇವಿ ನಿಬಂಧಕರು, ಹೊಸಪೇಟೆ ಉಪವಿಭಾಗ, ಹೊಸಪೇಟೆ ಅಥವಾ 08394231575ಗೆ ಕರೆ ಮಾಡಿ ದೂರು ಸಲ್ಲಿಸಬಹುದಾಗಿದೆ.

## ಸ್ಟುಡೆಂಟ್ ಕಾಲಂ

# ನಮ್ಮ ಆರೋಗ್ಯ ನಮ್ಮ ಕೈಯಲ್ಲಿ



ಅಂದು ಕೊನೆಯ ಅವಧಿಯಲ್ಲಿ ಗೆಳತಿಯರೊಂದಿಗೆ ಕಣ್ಣಾಮುಚ್ಚಾಲೆ ಆಟವಾಡುತ್ತಿದ್ದೆ. ಹೀಗೆ ಆಟುವಾಗ ನಾಲ್ಕಾರು ಗೆಳತಿಯರು ಕ್ಲಾಸ್ ರೂಮಿನ ಹಿಂದೆ ಅವಿತುಕೊಂಡಿದ್ದೆವು. ಅವಿತುಕೊಂಡಾಗ ಕಿಟಕಿ ಪಕ್ಕದಲ್ಲಿ ನಾಲ್ಕಾರು ಮಾತ್ರೆಗಳು ಕಣ್ಣಿಗೆ ಬಿದ್ದವು. ಆರಿಸಿಕೊಂಡು ನೋಡಿದೆ. ಅವು ವಾರಕ್ಕೊಮ್ಮೆ ನಮಗೆನೀಡುವಕಬ್ಬಿಣಾಂಶದಮಾತ್ರೆಗಳಾಗಿದ್ದವು. ಅವುಗಳನ್ನು ಕೈಯಲ್ಲಿ ಹಿಡಿದುಕೊಂಡು ಆಫೀಸ್ ರೂಮಿಗೆ ಹೋದೆ. ದೈಹಿಕ ಶಿಕ್ಷಕರಿಗೆ ಮಾತ್ರೆಗಳನ್ನು ತೋರಿಸಿ, 'ಸರ್, ಇವು ತರಗತಿಯ ಕಿಟಕಿ ಬಳಿ ಸಿಕ್ಕವು' ಎಂದೆ. ಶಿಕ್ಷಕರಿಗೆ ಆಶ್ಚರ್ಯವಾಯಿತು. ಅವರೂ ನಮ್ಮ ಜೊತೆ ಬಂದರು. ಕಿಟಕಿ ಬಳಿ ಹುಡುಕಿದೆವು. ಪುನಃ ನಾಲ್ಕಾರು ಮಾತ್ರೆಗಳು ದೊರೆತವು. ಕೂಡಲೇ ಶಿಕ್ಷಕರು ವಿಷಲ್ ಹಾಕಿ ಆ ತರಗತಿಯ ಎಲ್ಲಾ ವಿದ್ಯಾರ್ಥಿಗಳನ್ನು ಒಳಗೆ ಕರೆದರು. ಕಿಟಕಿಯ ಬಳಿ ಕೂರುತ್ತಿದ್ದ ವಿದ್ಯಾರ್ಥಿಗಳನ್ನು ವಿಚಾರಿಸಿದರು. ಅದರಲ್ಲಿ ಒಬ್ಬ ವಿದ್ಯಾರ್ಥಿ ಮಾತ್ರೆಗಳನ್ನು ತಾನೇ ಹೊರಹಾಕಿದ್ದಾಗಿ ಒಪ್ಪಿಕೊಂಡ. ಶಿಕ್ಷಕರು ಕಾರಣ ಕೇಳಿದಾಗ ಅವರು ಬೇರೆ ಕಾರಣಗಳಿಗಾಗಿ ನಿತ್ಯವೂ ಬೇರೆ ಮಾತ್ರೆಗಳನ್ನು ತೆಗೆದುಕೊಳ್ಳುವುದರಿಂದ ಶಾಲೆಯಲ್ಲಿ ನೀಡಿದ ಮಾತ್ರೆ ನುಂಗುತ್ತಿಲ್ಲ ಎಂದು ತಿಳಿಸಿದ. ನಂತರ ಶಿಕ್ಷಕರು ಮಾತ್ರೆಗಳ ಮಹತ್ವವನ್ನು ತಿಳಿಸಿ ಎಲ್ಲರೂ ಕಡ್ಡಾಯವಾಗಿ ಶಾಲೆಯಲ್ಲಿ ನೀಡಿದ ಮಾತ್ರೆ ನುಂಗುವಂತೆ ಪ್ರೇರೇಪಿಸಿದರು.



ಅಂದು ಶಾಲೆ ಮುಗಿಸಿಕೊಂಡು ಮನೆಗೆ ಹೋದರೂ ಅದೇ ವಿಷಯ ತಲೆಯಲ್ಲಿ ಗಿರಕಿ ಹೊಡೆಯುತ್ತಿತ್ತು. ನಮ್ಮ ಆರೋಗ್ಯಕ್ಕಾಗಿ ಸರಕಾರ ಎಷ್ಟೊಂದು ಖರ್ಚು ಮಾಡುತ್ತಿದೆಯಲ್ಲ ಎನಿಸಿತು. ವರ್ಷಕ್ಕೆ ಒಂದೆರಡು ಬಾರಿ ವೈದ್ಯಕೀಯ ತಪಾಸಣೆ, ವಾರಕ್ಕೊಮ್ಮೆ ಕಬ್ಬಿಣಾಂಶದ ಮಾತ್ರೆ, ವರ್ಷಕ್ಕೆ ಎರಡು ಬಾರಿ ಜಂತು ನಿವಾರಣಾ ಮಾತ್ರೆ, ದೃಷ್ಟಿ ದೋಷ ತಪಾಸಣೆ, ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನು ನಮಗಾಗಿ ಮಾಡುತ್ತಿರುವಾಗ ನಾವೇಕೆ ನಮ್ಮ ಆರೋಗ್ಯದ ಬಗ್ಗೆ ಕಾಳಜಿ ತೆಗೆದುಕೊಳ್ಳುತ್ತಿಲ್ಲ ಎನಿಸಿತು.

ನಿತ್ಯವೂ ಶಾಲೆಯಲ್ಲಿ ನೀಡುವ ರಾಗಿ ಮಾಲ್ಟ್, ಹಾಲು, ಬಿಸಿಯೂಟ, ಮೊಟ್ಟೆ/ಬಾಳೆಹಣ್ಣು, ಇವೆಲ್ಲವೂ ನಮ್ಮ ಆರೋಗ್ಯವನ್ನು ಕಾಪಾಡುವಲ್ಲಿ ಮಹತ್ವದ ಯೋಜನೆಗಳಾಗಿವೆ. ಜೊತೆಗೆ ಬಾಲಕಿಯರಿಗೆ ನೀಡುವ ಶುಚಿ ಪ್ಯಾಡ್‌ಗಳು ಸಹ ನಮ್ಮ ಆರೋಗ್ಯ ರಕ್ಷಣೆಯಲ್ಲಿ ಮಹತ್ವದ ಅಂಶಗಳಾಗಿವೆ. ಅದೆಷ್ಟೋ ವಿದ್ಯಾರ್ಥಿಗಳು ಬಿಸಿಯೂಟದಲ್ಲಿನ ತರಕಾರಿ, ಸೊಪ್ಪುಗಳನ್ನು ತಟ್ಟೆಯ ಪಕ್ಕಕ್ಕೆ ಸರಿಸಿ ಊಟ ಮಾಡುವುದನ್ನು ಗಮನಿಸಿದ್ದೇನೆ. ಇದೆಲ್ಲವೂ ನಮ್ಮ ಆರೋಗ್ಯಕ್ಕೆ ಅಗತ್ಯವಲ್ಲವೇ. ತರಕಾರಿ ಮತ್ತು ಸೊಪ್ಪುಗಳು ನಮಗೆ ಹೆಚ್ಚು ವಿಟಮಿನ್ ನೀಡುವ ಆಹಾರ ಸಾಮಗ್ರಿಗಳಾಗಿವೆ. ಅಂತೆಯೇ ಬೇಳೆಯಿಂದ ಪ್ರೋಟೀನ್ ಸಿಗುತ್ತದೆ. ಅಕ್ಕಿಯಿಂದ ಯಥೇಚ್ಛವಾದ ಕಾರ್ಬೋಹೈಡ್ರೇಟ್ಸ್ ಸಿಗುತ್ತದೆ. ಇವೆಲ್ಲವೂ ನಮ್ಮ ಆರೋಗ್ಯವನ್ನು ಉತ್ತಮಪಡಿಸುವಲ್ಲಿ ಮಹತ್ವದ ಅಂಶಗಳು ಅಲ್ಲವೇ? ಉಚಿತವಾಗಿ ದೊರೆಯುವ ಇವುಗಳನ್ನು ಸೇವಿಸಿ ನಮ್ಮ ಆರೋಗ್ಯವನ್ನು ನಾವೇ ಕಾಪಾಡಿಕೊಳ್ಳದಿದ್ದರೆ ಹೇಗೆ? ಶಿಕ್ಷಕರು ಉತ್ತಮ ಆರೋಗ್ಯ ಅಭ್ಯಾಸಗಳ ಬಗ್ಗೆ ಹೇಳಬಹುದು ಅಷ್ಟೆ. ಆದರೆ ಅದನ್ನು ನಾವು ಪರಿಪಾಲಿಸಿದರೆ ಮಾತ್ರ ನಮ್ಮ ಆರೋಗ್ಯವನ್ನು ಚೆನ್ನಾಗಿ ಕಾಡಿಕೊಳ್ಳಬಹುದು ಅಲ್ಲವೇ? ಸರ್ಕಾರದಿಂದ ಬರುವ ಆರೋಗ್ಯದ ಸೌಲಭ್ಯಗಳನ್ನು ದುರುಪಯೋಗ ಮಾಡಿಕೊಳ್ಳದೇ ಸರಿಯಾಗಿ ಬಳಸಿಕೊಳ್ಳುವ ಮೂಲಕ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳೋಣವೇ?

**– ಎ.ಸೃಷ್ಟಿ. 9ನೇ ತರಗತಿ.**

**ಸರ್ಕಾರಿ ಪ್ರೌಢಶಾಲೆ ಬಸರಕೋಡು. ಹಗರಿಬೊಮ್ಮನಹಳ್ಳಿ(ತಾ)**

# ಓಡುವ ಮನಸ್ಸಿಗೊಂದಷ್ಟು ವಿಶ್ರಾಂತಿಯ ತಂಗುದಾಣಗಳು...

ಓಡುವ ಮನಸ್ಸಿಗೊಂದಷ್ಟು ವಿಶ್ರಾಂತಿಯ ತಂಗುದಾಣಗಳ ನಿರ್ಮಾಣವನ್ನು ಮಾಡಿಕೊಳ್ಳಬೇಕಿದೆ. ಹೌದು ಸೂರ್ಯಚಂದ್ರರಷ್ಟೆ ಅಲ್ಲ ಕಾಲನ ಓಟದಲ್ಲಿ ಸಿಲಿಕೊಂಡಿರುವ ಸಕಲ ಜೀವ ಜಂತುಗಳೂ ಓಡುತ್ತಿವೆ ಗೊತ್ತುಗುರಿಯಿಲ್ಲದೆ, ತಲುಪಬೇಕಾದ ಗಮ್ಯದ ಅರಿವೇ ಇಲ್ಲದೆ, ಮಾಡಬೇಕಾದ ಕೆಲಸ ಕಾರ್ಯದ ಉದ್ದೇಶಗಳ ಸ್ಪಷ್ಟತೆ ಕಂಡುಕೊಳ್ಳದೆ. ಹೌದಲ್ಲವೆ..? ಬದುಕ ಬಂಡಿಯನ್ನು ಕಟ್ಟಿಕೊಂಡು ಭವಬಾರವೆಂಬ ಬಾಳ್ವೆಯ ಪತದಲ್ಲಿ ಜೀವ ಸವೆಸುತ್ತಾ ಓಡಿದ್ದೇ ಓಡಿದ್ದು ಅಂತ್ಯವಿಲ್ಲದ ಅನಂತದೆಡೆಗೆ..! ಹುಟ್ಟು ಮತ್ತು ಸಾವುಗಳ ಮಧ್ಯದ ಆಕಾರವನ್ನು ಸಾಕಾರಗೊಳಿಸಿಕೊಳ್ಳುವ ಭರದಲ್ಲಿ ಸವೆಸಿದ ದಾರಿಗಳೆಷ್ಟೊ, ಇನ್ನೂ ಸವೆಸಬೇಕಾಗಿರುವುದೆಷ್ಟೊ ಕೊನೆಗೆ ಸೇರಬೇಕಾಗಿರುವುದೆಲ್ಲೊ..? ಲೌಖಿಕ ಜಗತ್ತಿನ ನಿತ್ಯ ನಾಟಕದಲ್ಲಿ ಕಂಡುಕೊಳ್ಳಬೇಕಾಗಿದೆ ಅಲ್ಲಲ್ಲಿ ಕೆಲವು ತಂಗುದಾಣಗಳನ್ನು, ಅಲ್ಲೆಲ್ಲಾ ಪಡೆದುಕೊಳ್ಳಬೇಕಾಗಿದೆ ಮನಸ್ಸಿಗೊಂದಷ್ಟು ವಿಶ್ರಾಂತಿಯನ್ನು ಮತ್ತೆ ಮುಂದಾಗಬೇಕಲ್ಲವೆ ಓಟಕ್ಕೆ, ಗುರಿಮುಟ್ಟುವ ಗಮ್ಯದಾಟಕ್ಕೆ.

ಹೌದು ಸ್ನೇಹಿತರೆ, ಪ್ರತಿನಿತ್ಯದ ಜೀವನದ ಜಂಜಾಟದಲ್ಲಿ ಸಾಕಪ್ಪ ಸಾಕು ಈ ಜೀವನ ಎಷ್ಟೆಂದು ಹುಡುಕುವುದು, ಏನೆಂದು ತರುವುದು, ಎಲ್ಲಿಗಂತ ನಡೆಯುವುದು ಪ್ರತೀ ಬೇಳಗೂ ಒಂದು ರೀತಿಯ ಭಯವನ್ನು ಹೊತ್ತು ಬರುವುದನ್ನು ನೋಡಿದರೆ ಪ್ರತಿಯೊಬ್ಬನಿಗೂ ಹೀಗನಿಸುವುದು ಸಹಜವೆ. ಹಾಗಂತ ಯಾರು ತಾವು ಮಾಡುವ ಪ್ರಯತ್ನವನ್ನು ಬಿಟ್ಟಿಲ್ಲ, ತಮ್ಮ ಜೀವನದ ಓಟವನ್ನು ನಿಲ್ಲಿಸಿಲ್ಲ, ಮಾಡಬೇಕಾದ ಕೆಲಸಕಾರ್ಯಗಳನ್ನು, ತಮ್ಮ ದೈನಂದಿನ ಕರ್ಮಗಳನ್ನು ಮುಂದೂಡುವುದಿಲ್ಲ. ಸಾಕಪ್ಪ ಸಾಕು ಈ ಜೀವನ ಉಸ್ಸಪ್ಪಾ.... ಎನ್ನುತ್ತಾ ಹಾಸಿಗೆ ಹಾಸುವ ನಮ್ಮ ಜನ "ಕರಮುಗಿದು ದೇವರೆ ನಾಳೆಯ ನಮ್ಮ ಜೀವನವನ್ನು ಉತ್ತಮವಾಗಿಸು" ಎನ್ನುತ್ತಲೇ ನಿದ್ರೆಗೆ ಜಾರಿಕೊಳ್ಳುತ್ತಾರೆ ಅಲ್ಲವೆ?

ಇದನ್ನೇ ದೊಡ್ಡವರು ಬದುಕಿಗೊಂದು ಭರವಸೆ ಬೇಕು ಅಂತಾರಲ್ಲವೆ?. ಅದೇನೆ ಇರಲಿ ಓಡುವ ಈ ಜಗತ್ತಿನಲ್ಲಿ ಆರಂಭದಂತೆ ಒಂದು ಅಂತ್ಯವೂ ಇದ್ದೇ ಇದೆ, ಅದರಂತೆ ಈ ಆರಂಭ ಮತ್ತು ಅಂತ್ಯದ ನಡುವಿನ ಏಳು ಬೀಳುಗಳ ಈ ಜೀವನ ಪಥದಲ್ಲಿ ಸುಖಕ್ಕೊ-ದುಃಖಕ್ಕೊ, ಆನಂದಕ್ಕೊ-ಆಸೆಗೊ, ಕೊನೆ ಪಕ್ಷ ಆಸರೆಗಾದರೂ ಒಂದು ಚಿಕ್ಕ ಪಾ...ಜ್, ಒಂದು ಸಣ್ಣ ನಿಲುಗಡೆ, ಒಂದು ಸಣ್ಣ ವಿಸ್ರಾಂತಿ ಬೇಕಲ್ಲವೆ? ಹಾಗೆ ಬೇಕಂದಾಗಲೆಲ್ಲ ವಿಶ್ರಮಿಸಿ ಮತ್ತೆ ಕೊಡವಿ ನಿಲ್ಲಲು, ಭವಿಶ್ಯದ ಬದುಕಿಗೆ ಮುಂದಡಿಯಿಡಲು ಒಂದು ಸಣ್ಣ ಅವಕಾಶ, ಒಂದು ಚಿಕ್ಕ ಜಾಗ, ಒಂದಿಬ್ಬರು ನನ್ನವರೇ ಎನ್ನಭಹುದಾದ ಜೀವಗಳು, ಒಂದೆರಡು ನನಗಾಗಿ ನನ್ನ ಸ್ವಂತಕ್ಕೆ ಅಂದುಕೊಳ್ಳಬಹುದಾದ ನಿಮಿಷಗಳು ಬೇಕಲ್ಲವೆ..? ಅಂತಹ ಅಮೃತಕ್ಕೆ ಸಮಾನವಾದ ಸಣ್ಣ ಸಣ್ಣ ಸದಾವಕಾಶಗಳನ್ನೆ ಜೀವನವೆಂಬ ಪಯಣದಲ್ಲಿ ಅಲ್ಲಲ್ಲೆ ಕಂಡುಬರುವ ಮರುಭೂಮಿಯ ಓಯಾಸಿಸ್ಸನಂತೆ, ಜೀವಸಾರದ ಸಾಗರದ ನಡುಮಧ್ಯದಲ್ಲಿ ಅಲೆಗಳ ಅಬ್ಬರಕ್ಕೆ ಬೆದರಿ ಬೆಂಡಾದ ಪತಿಕನಿಗೆ ಅಲ್ಲಲ್ಲಿ ಕಂಡುಬರುವ ಸಣ್ಣ ಪುಟ್ಟ ದ್ವಿಪದಂತೆ ಈ ತಂಗುದಾಣಗಳು.

ಜೀವನದ ಹಾದಿಯಲ್ಲಿ ಸುಖವಿರಲಿ ದುಃಖವಿರಲಿ, ಅದು ದೇಹಕ್ಕಾಗಿರಲಿ ಇಲ್ಲವೇ ಮನಸ್ಸಿಗೇ ಬೇಕಾಗಿರಲಿ, ಸುಃಖ-ದುಃಖ ದುಮ್ಮಾನಗಳನ್ನು ಸಹಿಸಿಕೊಳ್ಳಲಿಕ್ಕೆ, ಸುಖ-ಸಂತೋಷವನ್ನು ಆನಂದಿಸಲು ಒಂದು ಸಣ್ಣ ನಿಲುಗಡೆ, ಒಂದು ಚಿಕ್ಕ ವಿಶ್ರಾಂತಿ, ಒಂದು ರೀತಿಯ ಎಕ್ಸಾಷ್ಟಡ್, ನಿರ್ವಾತದಂತಹ, ಎಲ್ಲ ಅಂದರೆ ಎಲ್ಲಾ ಕಾಲಿ ಕಾಲಿಯಾದ ನಂತರದ ಆ ಗಳಿಗೆ ಇದೆಯಲ್ಲ ಅದು ಪ್ರತಿಯೊಬ್ಬರಿಗೂ ಒಂದಿಲ್ಲೊಮ್ಮೆ ಬೇಕು ಅನಿಸಿರುತ್ತದೆ, ಹಾಂ... ಹಾಗೆ ಅದು ಪ್ರತಿಯೊಬ್ಬರಿಗೂ ಬೇಕೆ ಬೇಕು ಕೂಡ. ಅಂತಹ ವಿಶ್ರಾಂತಿಯ ತಂಗುದಾಣಗಳನ್ನು ನಮ್ಮ ನಿತ್ಯ ಜೀವನದಲ್ಲಿ ಕಂಡುಕೊಳ್ಳುವುದು ಹೇಗೆ..? ನಾವು ಓಡುವ ದಾರಿಯಲ್ಲಿ ಯಾವೆಲ್ಲಾ ತಂಗುದಾಣಗಳು ಇವೆ ಎಂಬುದನ್ನು ನೋಡುವುದಾದರೆ.

### 1. ದೈಹಿಕ ವಿಶ್ರಾಂತಿ:

ಪ್ರತಿಯೊಂದು ಜೀವಜಂತುಗಳು ತನ್ನ ಪ್ರತಿನಿತ್ಯದ ಅತೀ ಅವಶ್ಯಕ ಬೇಕುಗಳಾದ ಗಾಳಿ, ನೀರು, ಆಹಾರ, ಆಶ್ರಯ ಮತ್ತು ಮೈಥುನಗಳಿಗಾಗಿ ಒಂದಿಲ್ಲೊಂದು ರೀತಿಯಲ್ಲಿ ಪ್ರಯತ್ನವನ್ನು ಮಾಡುತ್ತಲೇ ಇರುತ್ತವೆ, ಇವುಗಳ ಹುಡುಕಾಟದಲ್ಲಿ, ಕೆಲವು ಸಲ ಪಡೆದುಕೊಳ್ಳುವಹೋರಾಟದಲ್ಲಿದೈಹಿಕವಾಗಿಜರ್ಜರಿತವಾಗುತ್ತೇವೆ, ಸ್ನಾಯುಗಳಲ್ಲಿನ ಶಕ್ತಿ ಕುಂದಿದಾಗ ಅದರ ಮರುಸ್ಥಾಪನೆಗಾಗಿ ದೈಹಿಕ ವಿಶ್ರಾಂತಿಯ ಅವಶ್ಯಕತೆ ಬೇಕಾಗುತ್ತದೆ. ಇಲ್ಲಿ ದೈಹಿಕ ವಿಶ್ರಾಂತಿ ಎಂದರೆ ಅದು ಒಂದು ಬಾಹ್ಯ ಮತ್ತು ಆಂತರಿಕ ಅಡೆತಡೆಗಳಿಲ್ಲದೆ, ಯಾವುದೇ ರೀತಿಯ ಪ್ರಚೋಧನೆಗಳಿಲ್ಲದೆ ದೇಹಕ್ಕೆ ನೀಡುವ ವಿಶ್ರಾಂತಿ ಎಂದರ್ಥ. ಇಲ್ಲಿ ಕೇವಲ ಮಲಗಿಕೊಂಡಿರುವುದು ಅಷ್ಟೇ ಅಲ್ಲದೆ ಒಂದು ಆಹ್ಲಾದಕರ ವಾತಾವರಣದಲ್ಲಿ ವಿಶ್ರಮಿಸಿದರೂ ಸರಿಯೇ, ಅಂತಹ ಒಂದು ದೈಹಿಕ ವಿಶ್ರಾಂತಿ ಪ್ರತಿಯೊಬ್ಬರಿಗೂ ಬೇಕು.

### 2. ಮಾನಸಿಕ ವಿಶ್ರಾಂತಿ:

ಹೇಗೆ ಪ್ರತಿಯೊಂದು ಜೀವಜಂತುಗಳು ದೈಹಿಕ ಅಗತ್ಯಗಳನ್ನು ಪೂರೈಸಿಕೊಳ್ಳವ ಹೋರಾಟದಲ್ಲಿ ಹೇಗೆ ದೈಹಿಕವಾಗಿ ಕುಗ್ಗುತ್ತವೆಯೋ, ಹಾಗೆಯೇ ಇವುಗಳ ಈಡೇರಿಕೆಯ ವ್ಯತ್ಯಯದಲ್ಲಿ ಮತ್ತು ವ್ಯತ್ಯಯದ ಪ್ರಮಾಣ ಮತ್ತು ಅದರ ಪರಿಣಾಮಗಳಿಂದಾಗಿ ಮಾನಸಿಕ ಆರೋಗ್ಯದಲ್ಲಿನ ವ್ಯತ್ಯಸವನ್ನು ಕಾಣಬಹುದಾಗಿದೆ. ಪ್ರತಿಯೊಬ್ಬರ ಬದುಕಿನಲ್ಲಿ ಇಂತಹ ಹಲವಾರು ಸನ್ನಿವೇಶಗಳು ಕಂಡು ಬರುತ್ತವೆ. ಹಾಗೆ ಆದಾಗಲೆಲ್ಲ ಅದರಿಂದ ಹೊರಬರಲು ಅವನಿಗೊಂದು ವಿಶ್ರಾಂತಿಯ ಅವಶ್ಯಕತೆ ಇದೆ, ಅದೇ ಒಂದು "ಮೈಂಡ್ ಫುಲ್ ನೆಸ್" ಅಂತಾರಲ್ಲ ಅಂತಹ ಒಂದು ಅನುಭವದ ಅನಿವಾರ್ಯತೆ ಅವರಿಗಿರುತ್ತದೆ. ಸಮಸ್ಯೆಯ ಕುರಿತ ಒಂದು ಪ್ರಾಥಮಿಕ ಹಂತದ ವಿಶ್ಲೇಷಣೆಯ ಅಗತ್ಯತೆ ಅಲ್ಲಿ ಕಂಡುಬರುತ್ತದೆ. ಹಾಗೆ ಯಾರು ಯಾರು ಅತ್ಯಂತ ಚಿಕ್ಕ ಚಿಕ್ಕ ಹಂತದಲ್ಲಿನ ಅಡೆತಡೆಗಳನ್ನು ನೀವಾರಿಸಿಕೊಳ್ಳಲು ಕಂಡುಕೊಳ್ಳುವ ಮಾರ್ಗಗಳಿವೆಯೊ ಆ ಮಾರ್ಗಗಳೆ ಮತೊಂದು ವಿಶ್ರಾಂತಿಯ ತಂಗುದಾಣವಾಗಿ ಕಾಣಸಿಗುತ್ತದೆ.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

### 3. ಭಾವನಾತ್ಮಕ ವಿಶ್ರಾಂತಿ:

ಮೂಲತಃ ಭಾವನಾತ್ಮಕ ಜೀವಿಯಾಗಿರುವ ಮನುಷ್ಯನು ತನ್ನ ಭಾವಪಟಲದಲ್ಲುಂಟಾದ ತಲ್ಲಣಗಳನ್ನು ತನ್ನದೇ ಆದ ರೀತಿಯಲ್ಲಿ ವ್ಯಕ್ತಪಡಿಸಲು ಬಯಸುತ್ತಾನೆ. ಆದರೆ ಬಹುಪಾಲು ಸಮಯದಲ್ಲಿ ಇಂತಹ ಅವನ ಪ್ರಯತ್ನಗಳು ವಿಫಲವಾದಾಗ ಅವನು ಭಾವನಾತ್ಮಕವಾಗಿ ಕುಗ್ಗಿಹೋಗುವುದನ್ನು ನಾವು ಗಮನಿಸುತ್ತೇವೆ. ಒಂದು ಶೇಡಿನಲ್ಲಿ ಮನುಷ್ಯನು ಮಾನಸಿಕವಾಗಿ ಆರೋಗ್ಯವಿದ್ದಂತೆ ಕಂಡರೂ, ಅವನ ಭಾವನಾತ್ಮಕ ನಿಲುಗಡೆ, ಅವನ ಮಾನಸಿಕ ವಿಶ್ರಾಂತಿಯ ಮೊದಲ ಹಂತ ಇದಾಗಿರುತ್ತದೆ. ನಾವು ಗಮನಿಸಿದಂತೆ ಮನುಷ್ಯನಿಗೆ ಎಲ್ಲಾ ಇದ್ದಾಗಲೂ ಅಂದರೆ ಸಾಕಷ್ಟು ಹಣ ಇದೆ, ಒಳ್ಳೆಯ ದೈಹಿಕ ಆರೋಗ್ಯವಿದೆ, ನೋಡಲು ಸುಂದರ ಕಾಯವಿದೆ ಮನುಸ್ಸೂ ಸ್ಥಿರವಾಗಿದೆ ಎಂದರೂ, ಪ್ರತಿಯೊಬ್ಬ ಮನುಷ್ಯನೂ ತನ್ನಲ್ಲಾದ ಸುಖ-ದುಃಖವಗಳನ್ನು, ನೋವು-ನಲಿವುಗಳನ್ನು, ಆಸೆ-ಆಕಾಂಕ್ಷೆಗಳನ್ನು ಬೇಕು-ಬೇಡಗಳನ್ನು ವ್ಯಕ್ತಪಡಿಸಲು ಚಡಪಡಿಸುವಂತಹ ವಾತವರಣವಿದೆಯಲ್ಲ ಅದು ಸರಿಯಲ್ಲ.



ಪ್ರತಿಯೊಬ್ಬರೂ ಸಾಧ್ಯವಾದರೆ ಅಂತಹ ಸಂದರ್ಭದಲ್ಲಿ ಚಿಕ್ಕದಾಗಿ ಅಳುವುದೊ, ಇಲ್ಲವೇ ನಗುವುದು, ಇಲ್ಲವೆ ಒಂದು ದೊಡ್ಡದಾದ ಕೇಕೆ, ಒಂದೆರಡು ಕುಣಿತಗಳನ್ನು ಮಾಡಿಯಾದರೂ ತನ್ನ ಭಾವವಲಯದ ಉತ್ಕಟವಾದ ಹೊಯ್ದಾಟಗಳನ್ನು ಹೊರ ಹಾಕಲೇ ಬೇಕು. ಅದಕ್ಕಾಗಿ ಸರಿಯಾದ ಜಾಗ, ಜನರು, ಸಮಯವನ್ನು ಮತ್ತು ಸರಿಯಾದ ರೀತಿಯಲ್ಲಿ ವ್ಯಕ್ತಪಡಿಸುವ ಮಾರ್ಗವನ್ನು ಗುರುತಿಸಿಕೊಳ್ಳುವುದು ಮುಖ್ಯ ವಾಗುತ್ತದೆ. ಅಂತಹ ಚಿಕ್ಕಪುಟ್ಟ ಅವಕಾಶಗಳನ್ನೇ ಬಳಸಿ ಕೊಂಡಾಗಲೆ ಮನುಷ್ಯ ಭಾವನಾತ್ಮಕವಾಗಿ ನಿರಾಳವಾಗುತ್ತಾನೆ, ಒಂದು ರೀತಿಯಲ್ಲಿ ರೀಪ್ರೆಶ್ ಅಂತಾರಲ್ಲ ಅಥವಾ ಒಂದು ರೀಸೆಟ್ ಆಗುವಂತಹ ಅವಕಾಶವೇ, ಅದುವೇ ಭಾವನಾತ್ಮಕ ವಿಶ್ರಾಂತಿಯ ನಿಲುಗಡೆಯಂತೆ ಕೆಲಸಮಾಡುತ್ತದೆ.

### 4. ಆಧ್ಯಾತ್ಮಿಕ ವಿಶ್ರಾಂತಿ:

ಸಹಜವಾಗಿ ಮನುಷ್ಯನಿಗೆ ಲೌಖಿಕ ಜೀವನದಲ್ಲಿ ಎಲ್ಲವು ಇದ್ದಾಗಲೂ ಅವನ ಬದುಕು ಸಂಪೂರ್ಣವಾಗುವುದಿಲ್ಲ ಅವನ ಬದುಕಿಗೊಂದು ಪರಿಪೂರ್ಣತೆ ಬರುವುದಿಲ್ಲ ಆಗ ಇನ್ನು ಏನೂ ಬೇಕಾಗಿದೆ ಎನ್ನುವ ಭಾವ ಅವನಲ್ಲಿ ಉಂಟಾಗುತ್ತದೆ ಆವಾಗಲೆ ಅವನ ಬದುಕಿನ ಇನ್ನೊಂದು ಅದ್ಯಾಯ ಪ್ರಂಭವಾಗುತ್ತದೆ, ಅದುವೆ ಆಧ್ಯಾತ್ಮದ ಮಜಲು. ವಾಸ್ತವವಾಗಿ ನಾನು, ನನ್ನ ಮಡದಿ ಮಕ್ಕಳು, ನನ್ನ ಮನೆ ಊರು ಮತ್ತೊಂದು ಮುಗಿದ ಮೇಲೆ ಮತ್ತೇನು? ಮುಂದೇನು..? ಯಾರು ನಾನು...? ನನ್ನ ಈ ಜೀವದ ಗುರಿ ಏನು..? ಎನ್ನುವ ಪ್ರಶ್ನೆ ಕಾಡಿದಾಗ ಸಹಜವಾಗಿ ಮನುಷ್ಯ ಗೊಂದಲಕ್ಕೆ ಈಡಾಗುತ್ತಾನೆ, ಆವಾಗಲೆ ಇಂತಹ ಗೊಂದಲಗಳಿಂದ ಹೊರಬರಲು ಅವನಿಗೆ ತನ್ನದೇ ಆದ ಒಂದು ಅವಕಾಶ, ಸ್ಥಳ, ತನ್ನವರೂ ಎನ್ನಬಹುದಾದ ಒಂದು ಸಂಘ, ಸಮೂಹ, ಒಂದೊಳ್ಳೆ ಪದ್ದತಿ ಅದು ಒಂದು ಪ್ರಾರ್ಥನೆಯಾಗಿರಬಹುದು, ಒಂದು ಭಜನೆಯಾಗಿರಬಹುದು, ಒಂದು ಧ್ಯಾನವಾಗಿರಬಹುದು ಹೀಗೆ ತನ್ನನ್ನು ತಾನು ತಿಲಿದುಕೊಳ್ಳಲು ಒಂದು ದಾರಿ ಬೇಕಲ್ಲವೆ, ಅದುವೆ ಆಧ್ಯಾತ್ಮಿಕ ಸಂಪರ್ಕ. ದಿನದ 24 ಗಂಟೆಗಳಲ್ಲಿ ಅಂತಹ ಕೆಲವು ನಿಮಿಷಗಳನ್ನಾದರೂ ಅವನು ಅನುಭವಿಸಲೇ ಬೇಕು. ಅದು ಅವನಿಗೆ ಅನೇಕ ಗೊಂದಲಗಳಿಗೆ ಸಮಾದಾನ ಮಾಡುವುದಲ್ಲದೆ, ಅವನು ತನ್ನ ಅಂತರಾಳದಿಂದ ಅತ್ಯಂತ ಸದೃಡ ಮತ್ತು ಶಾಂತಮತಿಯಾಗುತ್ತಾನೆ ಇದನ್ನೆ ಆಧ್ಯಾತ್ಮಿಕ ವಿಶ್ರಾಂತಿ ಎನ್ನುತ್ತಾರೆ ಮತ್ತು ಇದು ಅತೀ ಅವಶ್ಯಕ.

### 5. ಜ್ಞಾನೇಂದ್ರಿಯಗಳ ವಿಶ್ರಾಂತಿ:

ಪ್ರತಿಯೊಬ್ಬ ಮನುಷ್ಯನೂ ಒಂದು ರೀತಿಯಲ್ಲಿ ತನಗೆ ಬೇಕಾಗಿರುವುದನ್ನು ಪಡೆದುಕೊಳ್ಳಲು ಅವಿರತವಾದಂತಹ ಪ್ರಯತ್ನವನ್ನು ಮಾಡುತ್ತಲೇ ಇರುತ್ತಾನೆ, ಅದಕ್ಕಾಗಿ ಅವನ ದೇಹ ಮನಸ್ಸು ಬುದ್ಧಿಗಳ ಸಹಾಯದಿಂದ ತಾನು ಕಂಡುಕೊಂಡ ದತ್ತಾಂಶಗಳನ್ನು ವಿಶ್ಲೇಸಿಷಿ, ವಿಮರ್ಷಿಸಿ ತನಗೆ ಬೇಕಾದುದನ್ನು ಪಡೆದುಕೊಳ್ಳುತ್ತಾನೆ. ಈ ಕಾರ್ಯಕ್ಕಾಗಿ ಅವನು ತನ್ನ ಜ್ಞಾನೇಂದ್ರಿಯಗಳ ಸಹಾಯವನ್ನು ಅವಲಂಬಿಸಿರುತ್ತಾನೆ, ಆದರೆ ಸಹಜವಾಗಿ ಕಂಡುಕೊಳ್ಳಬೇಕಾಗಿರುವುದರ ಬದಲು ಅವನು ಹೆಚ್ಚು ಹೆಚ್ಚು ತಾಂತ್ರಿಕತೆಯ ವಸ್ತುಗಳ, ಯಂತ್ರಗಳ ಸಹಾಯಕ್ಕೆ ಒಗ್ಗಿಕೊಂಡು ತನ್ನ ಮೂಲಭೂತವಾದ ಜ್ಞಾನೇಂದ್ರಿಯಗಳ ಶಕ್ತಿ ಸಾಮರ್ಥ್ಯವನ್ನು ಹಾಳು ಮಾಡುತ್ತಿದ್ದಾನೆ.

ಒಂದರ್ಥದಲ್ಲಿ ಅವುಗಳ ಅನಪೇಕ್ಷಿತ, ಅಥವಾ ಅಧಿಕ ಬಳಕೆಯಿಂದಾಗಿ ಅವನು ಗೊಂದಲದಲ್ಲಿದ್ದಾನೆ ಒಂದು ರೀತಿಯ ಒತ್ತಡದಲ್ಲಿ ಸಿಲುಕಿ ನಿಸ್ತೇಜನಾಗುತ್ತಿದ್ದಾನೆ, ಮಾನಸಿಕವಾಗಿ ಕುಗ್ಗುತ್ತಿದ್ದಾನೆ, ದೈಹಿಕವಾಗಿ ಸೋಲುತ್ತಿದ್ದಾನೆ. ಹಾಗಾಗಿ ಆದಷ್ಟು ಅನಪೇಕ್ಷಿತ ಆಧುನಿಕ ಯಂತ್ರಗಳ ಸಹಾಯವನ್ನು ಬದಿಗಿರಿಸಿ, ಅಂದರೆ ಅವುಗಳ ಬಳಕೆಯನ್ನು ಮಿತಿಗೊಳಿಸಿ, ಒಂದೊಳ್ಳೆ ಶಾಂತತೆಯನ್ನು ತಂದುಕೊಂಡು ತನ್ನದೇ ಆದ ಜ್ಞಾನೇಂದ್ರಿಯಗಳ ಮುಖಾಂತರ ಹೆಚ್ಚು ಹೆಚ್ಚು ಒಳಗೊಳ್ಳಬೇಕು. ಇಲ್ಲಿ ವಿಶ್ರಾಂತಿ ಎಂದರೆ ಚಟುವಟಿಕೆ ಇಲ್ಲದೇ ಒಂದು ರೀತಿಯ ಐಡಿಲ್ ಆಗಿ ಕುಳಿತುಕೊಳ್ಳುವುದಲ್ಲ. ಅದರ ಬದಲು ಸರಿಯಾದುದನ್ನು, ಸರಿಯಾದ ಜಾಗದಲ್ಲಿ, ಸರಿಯಾದ ಪದ್ದತಿಯಲ್ಲಿ ಸದುಪಯೋಗಗೊಳಿಸಿಕೊಳ್ಳುವುದು ಎಂದರ್ಥ. ಇಂತಹ ವಿಶ್ರಾಂತಿಯ ಅವಕಾಶಗಳು ಅಗತ್ಯವಾಗಿ ಬೇಕು.

### 6. ಕ್ರಿಯಾತ್ಮಕ ವಿಶ್ರಾಂತಿ:

"ಚೇಂಜ್ ಆಫ್ ವರ್ಕ ಈಜ್ ರೆಸ್ಟ್" ಅಂತಾರಲ್ವೆ ಹಾಗೆ ಇದರರ್ಥ ಕೈಗೊಂಡ ಒಂದು ಕಾರ್ಯ ಸಂಪೂರ್ಣವಾದರೆ, ಇನ್ನೊಂದು ಕಾರ್ಯಕ್ಕೆ ಅಣಿಯಾಗುವುದಿದೆಯಲ್ಲ ಅದುವೇ ನಿಜವಾದ ವಿಶ್ರಾಂತಿ. ನಾವಿಲ್ಲಿ ಕ್ರಿಯಾತ್ಮಕವಾದಂತಹ ವಿಶ್ರಾಂತಿಯ ಬಗ್ಗೆ ಮಾತನಾಡುತ್ತಿರುವುದರಿಂದ ನೀವು ಕೈಗೊಳ್ಳುವ ಪ್ರತಿಯೊಂದು ಚಟುವಟಿಕೆಗಳು ಅತ್ಯಂತ ಸಹಜವಾಗಿರಬೇಕು, ಸದ್ವಿಚಾರಗಳನ್ನು ಒಳಗೊಂಡಿರಬೇಕು, ಸರ್ವರನ್ನೂ ಒಳಗೊಳ್ಳುವಂತೆ ಇರಬೇಕು, ಮತ್ತು ಸಮಷ್ಠಿಯ ಹಿತ ಕಾಪಾಡುವಂತಿರಬೇಕು. ಇಂತಹ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದೇ ಒಂದು ವಿಶ್ರಾಂತಿ ಅದು ನಮ್ಮೆಲ್ಲರ ಕ್ರಿಯಾತ್ಮಕ ವಿಶ್ರಾಂತಿ.

ಮನುಷ್ಯನಿಗೆ ಈ ರೀತಿಯ ವಿಶ್ರಾಂತಿಯ ಅವಶ್ಯಕತೆ ಇತ್ತೀಚಿಗಂತು ಬಹು ಮುಖ್ಯವಾಗಿದೆ. ದೈನಂದಿನ ಗೊಂದಲಗಳನ್ನು ಕೊಂಚ ಕಾಲ ಬದಿಗಿರಿಸಿ ನಿಮಗಿಷ್ಟವಾದ ಆಟಗಳಲ್ಲಿ ತೊಡಗಿಸಿಕೊಳ್ಳಿ, ನಿಮ್ಮ ಕೌಶಲ್ಯವನ್ನು ಇಮ್ಮಡಿಗೊಳಿಸುವಂತಹ ಚಟುವಟಿಕೆಯಲ್ಲಿ ಭಾಗಿಯಾಗಿ, ನಿಮ್ಮ ಸುತ್ತಮುತ್ತಲಿನ ಪ್ರಕೃತಿಯನ್ನು ನೋಡಿ ಆನಂದಿಸಿ, ನಿಮ್ಮವರ ಜಾಣ್ಮೆಯನ್ನು, ಕಲೆಯನ್ನು, ಅಭಿರುಚಿಗಳನ್ನು, ಆಸಕ್ತಿಗಳನ್ನು ಮನಸಾರೆ ಅಭಿನಂದಿಸಿ, ಅವರನ್ನೂ ನಾಲ್ಕು ಒಳ್ಳೆಯ ಮಾತುಗಳಿಂದ ಹೊಗಳಿ ಇನ್ನೇನು ಬೇಕು ಹೇಳಿ ಇದಕ್ಕಿಂತ ಕ್ರಿಯಾತ್ಮಕವಾಗಿ ವಿಶ್ರಮಿಸಲು ಸಾಧ್ಯವೆ..? ಹಾಗಾಗಿ ಪ್ರತಿಯೊಬ್ಬರಿಗೂ ಇಂತಹ ಕ್ರಿಯಾತ್ಮಕ ವಿಶ್ರಾಂತಿಯನ್ನು ನೀಡುವ ತಂಗುದಾಣಗಳು ಬೇಕು ಓಡುತ್ತಿರುವ ಈ ಮನ್ನಸ್ಸಿಗೆ ಸಣ್ಣ ಸಣ್ಣ ಇಂತಹ ನಿಲುಗಡೆಗಳು ಅತಿ ಮುಖ್ಯ.

### 7. ಸಾಮಾಜಿಕ ವಿಶ್ರಾಂತಿ:

ಕೌಟಂಬಿಕ ಚೌಕಟ್ಟಿನಲ್ಲಿ ಬೆಳೆಯುವ ಮನುಷ್ಯರು ಮುಂದೆ ಸಮಾಜಿಕ ವ್ಯವಸ್ಥೆಯಲ್ಲಿ ತಮ್ಮದೇ ಆದ ನೆಲೆಯನ್ನು ಕಂಡುಕೊಳ್ಳುತ್ತಾರೆ. ಇದು ಸಾಧ್ಯವಾಗಲು ಕಾರಣ ಅವನ ಕೌಟಂಬಿಕ ವ್ಯವಸ್ಥೆಯೇ, ಏಕೆಂದರೆ ಕುಟುಂಬವೂ ಸಹ ಸಾಮಾಜಿಕ ವ್ಯವಸ್ಥೆಯ ಒಂದು ಸಣ್ಣ ಮಾದರಿ ಅಲ್ವೆ? ಆದರೆ ಕುಟುಂಬದ ವ್ಯಾಪ್ತಿ ಚಿಕ್ಕದಾಗಿದ್ದರೆ, ಸಮಾಜದ ವ್ಯಾಪ್ತಿ ವ್ಯಾಪಕವಾಗಿರುತ್ತದೆ. ಹೇಗೆ ನಮ್ಮ ಕುಟುಂಬದಲ್ಲಿ ನಾವು ನಮ್ಮ ಪಾಲ್ಗೊಳ್ಳುವಿಕೆಯನ್ನು ತೋರಿಸುತ್ತವೆಯೋ ಹಾಗೆಯೇ ನಮ್ಮ ಪಾಲ್ಗೊಳ್ಳುವಿಕೆಯನ್ನು ಸಮಾಜದಲ್ಲೂ ಖಾತ್ರಿಪಡಿಸಬೇಕು.

ಒಂದು ಸಮಾಜದ ವಿವಿಧ ಸ್ತರಗಳಲ್ಲಿ ನಮಗೊಪ್ಪುವ, ನಮ್ಮ ಯೋಗ್ಯತೆಗೆ ತಕ್ಕುದಾದ, ನಮ್ಮ ಶಕ್ತಿ ಮತ್ತು ಸಾಮರ್ಥ್ಯಕ್ಕೆ ಅನುಗುಣವಾಗಿ, ನಮ್ಮ ಜವಾಬ್ದಾರಿಗಳನ್ನು, ಕರ್ತ್ಯವ್ಯಗಳನ್ನು, ನಮ್ಮ ನಮ್ಮ ಹಕ್ಕು ಬಾಧ್ಯತೆಗಳನ್ನು, ಆರೋಗ್ಯಯುತ ಸಾಮಾಜಿಕ ಸಂಬಂದಗಳನ್ನು ಕಾಪಾಡಿಕೊಳ್ಳುವಲ್ಲಿ, ಬಳಸಿಕೊಳ್ಳಬೇಕು ಮತ್ತು ಈ ನಿಟ್ಟಿನಲ್ಲಿನ ಇತರರ ಅಂತಹ ಹಂಬಲವನ್ನು ಪುರಸ್ಕರಿಸಬೇಕು ಮತ್ತು ಪ್ರೋತ್ಸಾಹಿಸಬೇಕು, ಅಂತಹ ಘಟನೆಗಳನ್ನು ಅಭಿನಂದಿಸಬೇಕು. ಹೀಗೆ ಸಾಮಾಜಿಕ ವ್ಯವಸ್ಥೆಯಲ್ಲಿ ಆರೋಗ್ಯಯುತ ಪಾಲ್ಗೊಳ್ಳುವಿಕೆಯನ್ನೆ ಸಮಾಜಿಕ ವಿಶ್ರಾಂತಿ ಎನ್ನುತ್ತಾರೆ. ಇಂತಹ ವಿಶ್ರಾಂತಿಗಳು ಮಾನವ ಸಮಾಜಕ್ಕೆ ಅತಿ ಮುಖ್ಯವಾಗುತ್ತವೆ. ಅಂತಹ ವಿಶ್ರಾಂತಿಯ ನೆಲೆಗಳನ್ನು ನಮ್ಮ ಬದುಕಿನ ಪಯಣದಲ್ಲಿ ನಮ್ಮ ಸುತ್ತಮುತ್ತಲೇ ನಾವು ಗುರುತಿಸಿಕೊಳ್ಳಬೇಕು ಮತ್ತು ಅಂತಹ ನಿಲ್ದಾಣಗಳನ್ನು ಸರಿಯಾಗಿ ಬಳೆಸಿಕೊಳ್ಳಬೇಕು.

ಹೀಗೆ ಯಾವುದೂ ಒಂದು ಭರವಸೆಯೊಂದಿಗೆ ಓಡುತ್ತಿರುವ ಈ ಬದುಕಿನ ಓಟದಲ್ಲಿ ಎಷ್ಟು ಜನ ತಮ್ಮ ಗಮ್ಯವನ್ನು ತಲುಪುತ್ತಾರೆ ಎನ್ನುವುದು ಯಾರಿಗೆ ಗೊತ್ತು..? ತಲುಪುವ ಹಂತದ ಮಧ್ಯದಲ್ಲೇ ಎಷ್ಟು ಜನರ ಈ ಓಟ ನಿಂತುಹೋಗುತ್ತದೆ ಯಾರು ಬಲ್ಲರು..? ಹಾಗಂತ ಪ್ರಯತ್ನವನ್ನು ಬಿಟ್ಟವರಿದ್ದಾರೆಯೇ..? ಇಲ್ಲ ತಾನೆ, ಹಾಗಾಗಿ ನಮ್ಮ ಬದುಕಿನ ಓಟ ನಿತ್ಯ ನಿರಂತರವಾಗಿ ನೆಡೆಯುತ್ತಲೇ ಇರಲಿ, ಗುರಿಯಡೆಗೆ ನೆಟ್ಟ ನಮ್ಮ ಪ್ರಯತ್ನವೂ ನಿಲ್ಲದಿರಲಿ, ಆದರೆ ಇವೆಲ್ಲವುಗಳ ಮಧ್ಯ ಇಲ್ಲಿಯವರೆಗೆ ನೆಡೆದು ಬಂದ ದಾರಿಯನ್ನೊಮ್ಮೆ ಹಿಂತಿರುಗಿ ನೋಡಿದಾಗ ಅಯ್ಯಯ್ಯೊ ಏನೆಲ್ಲ ಕಷ್ಟ ಪಟ್ಟೆ, ಎಷ್ಟೆಲ್ಲ ಕಳೆದುಕೊಂಡೆ, ಯಾರೆನ್ನೆಲ್ಲ ಬಿಡಬೇಕಾಯಿತು, ಏನೆಲ್ಲ ತ್ಯಾಗಮಾಡಬೇಕಾಯಿತು ಇಲ್ಲಿಯ ತನಕ ಬರಲು ಎನ್ನುವ ಒಂದು ನಿಟ್ಟುಸಿರಿನ ಬದಲು, ಅಹಾ ಏನೆ ಸವಾಲು ಬಂದರು, ಎಂತಹದ್ದೆ ಸಮಸ್ಯೆ ಎದುರಾದರೂ ನಾನು ಎದೆಗುಂದಲಿಲ್ಲ, ನನ್ನವರು ಕೈಬಿಡಲಿಲ್ಲ, ಎಷ್ಟೊಂದು ಜನ ಕೈಹಿಡಿದರು, ಸಹಾಯ ಮಾಡಿದರು, ಎಷ್ಟೇ ಗೊಂದಲಗಳಿದ್ದರೂ ತಿಳಿಗೊಳಿಸಿದರು, ಪ್ರೋತ್ಸಾಹಿಸಿದರು ಎನ್ನುವ ಒಂದು ಹೆಮ್ಮೆಯ ಭಾವ ನಮ್ಮಲ್ಲಿ ಮೂಡಿದ್ದೇ ಆದರೆ, ಅದಕ್ಕೆಲ್ಲ ಕಾರಣ ನಮ್ಮ ಜೀವನದ ಓಟದ ದಾರಿಯಲ್ಲಿ ನಾವು ಕಂಡುಕೊಂಡಿದ್ದಂತಹ ಈ ಚಿಕ್ಕ ಚಿಕ್ಕ ನಿಲ್ದಾಣಗಳು ಕಾರಣವಾದಾಗ, ಬೆಳಕಿನ ಬುಗ್ಗೆಯಂತೆ ಈ ನಿಲ್ದಾಣಗಳು ಅಲ್ಲಲ್ಲಿ ಹೊಳೆಯುತ್ತಿರುತ್ತವೆ ಅಲ್ವೆ..? ಅವುಗಳನ್ನ ಕಂಡಾಗ ನಾನು ಯಾವುದನ್ನೂ ಕಳೆದುಕೊಳ್ಳಲಿಲ್ಲ ಎನ್ನುವ ಸಾರ್ಥಕ ಭಾವನೆ ಮೂಡುತ್ತದೆ ನೋಡಿ, ಅದು ಸಾಕು ನಮ್ಮ ಈ ಬದುಕಿನ ಓಟಕ್ಕೆ ಒಂದು ಅರ್ಥಬರಲು ಅಂತಹ ಬೆಳಕಿನ ಬುಗ್ಗೆಗಳು ಪ್ರತಿಯೊಬ್ಬರ ಜೀವನದಲ್ಲಿ ಅಲ್ಲಲ್ಲಿ ಕಾಣುತ್ತಿರಲಿ, ಪ್ರತಿಯೊಬ್ಬರ ಓಡುವ ಮನಸ್ಸಿಗೊಂದಷ್ಟು ವಿಶ್ರಾಂತಿಯ ತಂಗುದಾಣಗಳಂತೆ ಹೊಳೆಯಲಿ.....

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**-: ಸಂಪಾದಕರು :-**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ-ಮೇಲ್:hampitimes@gmail.com

M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

**– ಜಾಹೀರಾತು ವ್ಯವಸ್ಥಾಪಕರು.**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ರಥಸಪ್ತಮಿ

ಮಾಘಮಾಸದ ಶುಕ್ಲಪಕ್ಷದ ಸಪ್ತಮಿ
ಸಂಭ್ರಮದಿ ಆಚರಿಸುವರು ರಥಸಪ್ತಮಿ
ಅಂದು ಸೂರ್ಯದೇವನ ಜನ್ಮದಿನ
ರವಿಯು ಪಥವನ್ನು ಬದಲಿಸುವ ಸುದಿನ

ಸಪ್ತಾಶ್ವಗಳ ರಥವೇರಿ ರವಿಯು
ಚಲಿಸುವನು
ಅರುಣನು ಅವನಿಗೆ ಸಾರಥಿಯಾಗಿರುವನು
ಜಗಕೆ ಹೊಸ ಚೈತನ್ಯವ ನೀಡುವನು
ಆರೋಗ್ಯವ ನೀಡುತ ದಿನಕರ ಬರುವನು

ಜಗಕೆ ಆಧಾರವಾಗಿರುವನು
ಸೂರ್ಯದೇವನು
ಮಹಾವಿಷ್ಣುವಿನ ಸಂಚಯ ರೂಪನಿವನು
ಸಕಲ ಚರಾಚರ ಜೀವಿಗಳನ್ನು
ಕಾಪಾಡುವನು
ದ್ರೌಪದಿಗೆ ಅಕ್ಷಯ ಪಾತ್ರೆಯನು
ನೀಡಿದವನು

ಸೂರ್ಯದೇವನಿಗೆ ಶಿರಸಾಷ್ಟಾಂಗ
ನಮಸ್ಕಾರಗಳು
ರಥಸಪ್ತಮಿಯ ಶುಭಾಶಯಗಳು

–ಚೇತನ ಭಾರ್ಗವ, ಬೆಂಗಳೂರು


### ಸಮರಸ ಜೀವನ

ಪ್ರತಿಯೊಬ್ಬರಲ್ಲಿಯೂ
ಬಾಳುವ ಬಯಕೆ
ಸಮರಸ ಜೀವನ.
ಸಾಧ್ಯವಾಗುವುದು ಇದ್ದರೆ
ಪರಸ್ಪರ ಗೌರವಿಸುವ,
ಒಲವಿನ ಭರವಸೆಯ
ಸಾಮರಸ್ಯ ಮೇಳೈಸುವ ಮನ.

– ಮಂಜುಶ್ರೀ ಮುರಳೀಧರ್.

### ನೆನಪಿನ ಟಾನಿಕ್

ಒಮ್ಮೆ ಓದಿದರೂ, ಅದರ ಅರ್ಥವನ್ನು ಗ್ರಹಿಸಲು ಪುನರಾವರ್ತನೆ ಮಾಡಿ ಓದಿದ ವಿಷಯದ ಬಗ್ಗೆ ಪ್ರಶ್ನೆಗಳನ್ನು ಹಾಕಿಕೊಂಡು ಅರ್ಥೈಸಿಕೊಳ್ಳಿ



### ತುಂಗಭದ್ರಾ ನೀರಿನ ಮಟ್ಟ

ಮಂಗಳವಾರ : 04–02–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1615.78 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 8149 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 50.291 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1588.21 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 266 ಕ್ಯುಸೆಕ್ |
| ಸಾಮರ್ಥ್ಯ | 9.601 ಟಿಎಂಸಿ |

### ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಕ್ರೋಧಿ

05–02–2025 – ಬುಧವಾರ

| | |
|---|---|
| ತಿಥಿ | : ಅಷ್ಟಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಭರಣಿ |
| ಯೋಗ | : ಶುಕ್ಲ |
| ಕರಣ | : ವಿಷ್ಟಿ |
| ಸೂರ್ಯೋದಯ | : 07:06:19 |
| ಸೂರ್ಯಾಸ್ತ | : 18:15:50 |
| ರಾಹು ಕಾಲ | : 12:41–14:05 |
| ಯಮಘಂಡ ಕಾಲ | : 08:30–09:54 |
| ಗುಳಿಕ ಕಾಲ | : 11:17–12:41 |

ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038

## ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರಸ್ಪರ್ಧೆ–10ರಲ್ಲಿ ಶಾಲೆಯಲ್ಲಿ ದಿ ಬೆಸ್ಟ್ ಚಿತ್ರ ಬಿಡಿಸಿದ ವಿದ್ಯಾರ್ಥಿಗಳು

**ಹಗರಿಬೊಮ್ಮನಹಳ್ಳಿ ತಾಲೂಕು**

1. ಮಾಲಾ ಪಿ
ಕೆ.ಪಿ.ಜಿ ಪ್ರೌಢಶಾಲೆ, ತಂಬ್ರಹಳ್ಳಿ
ಶಿಕ್ಷಕರು – ಜೆ.ರಾಜೇಶ್ವರಿ

2. ಕೆ. ಸ್ವಪ್ನ
ಸರ್ಕಾರಿ ಪ್ರೌಢಶಾಲೆ, ಸೊನ್ನ
ಶಿಕ್ಷಕರು– ಫಕೀರ್ ಗೌಡ ಪಾಟೀಲ್

3. ಕೆ. ನಂದಿತಾ
ಸರ್ಕಾರಿ ಪ್ರೌಢಶಾಲೆ, ವರದಾಪುರ
ಶಿಕ್ಷಕರು–ಮಂಜುಳಾ

4. ಎಂ. ಮಹೇಶ್ವರಿ
ಕೌದಿ ಮಹಾಂತೇಶ್ವರ ಪ್ರೌಢಶಾಲೆ,
ಬಾಚಿಗೊಂಡನಹಳ್ಳಿ
ಶಿಕ್ಷಕರು–ವಿ ಪ್ರಕಾಶಪ್ಪ

5. ಟಿ. ಮುಕ್ತುಂಬಿ
ಕೆ. ಪಿ. ಸರ್ಕಾರಿ ಪ್ರೌಢಶಾಲೆ, ಹಳೆ
ಹಗರಿಬೊಮ್ಮನಹಳ್ಳಿ
ಶಿಕ್ಷಕರು–ಮುದ್ದಮ್ಮ

6. ಕೆ.ಹರೀಶ್
ಎಲ್.ಎಚ್.ಎಸ್ ಪ್ರೌಢಶಾಲೆ, ಹಂಪಸಾಗರ
ಶಿಕ್ಷಕರು–ವಿಜಯಕುಮಾರ ಬೇಂದ್ರೆ

7. ಪಿ. ವಿನಾಯಕ
ಪಿ.ಕೆ.ಎಂ ಪ್ರೌಢಶಾಲೆ, ದಶಮಾಪುರ
ಶಿಕ್ಷಕರು–ಅನಿತಾ

8. ಪಿ.ಶಿವಕುಮಾರ
ಶ್ರೀ.ಗು.ಬ. ಪ್ರೌಢಶಾಲೆ, ಬೆಣಕಲ್ಲು
ಶಿಕ್ಷಕರು–ಶಿವತನಯ ಎಸ್.ಸಿ

9. ಸ್ನೇಹಾ ಸಿ
ಸರ್ಕಾರಿ ಪ್ರೌಢಶಾಲೆ, ಗದ್ದಿಕೇರಿ
ಶಿಕ್ಷಕರು–ರವಿಚಂದ್ರ ನಾಯ್ಕ ಎಲ್

10. ಪವಿತ್ರಾ
ಸರ್ಕಾರಿ ಪ್ರೌಢಶಾಲೆ, ಉಪನಾಯಕನಹಳ್ಳಿ
ಶಿಕ್ಷಕರು–ಕವಿತಾ

11. ಕೆ. ಪ್ರಿಯಾಂಕಾ
ಸರ್ಕಾರಿ ಪ್ರೌಢಶಾಲೆ, ವಲ್ಲಭಾಪುರ
ಶಿಕ್ಷಕರು– ಶಾಹಿದ್ ಬಾಷ .ಎನ್

12. ಯು. ಮಾರುತಿ
ಶ್ರೀ ಚಂದ್ರಮೌಳೇಶ್ವರ ಪ್ರೌಢಶಾಲೆ,
ಹಂಪಾಪಟ್ಟಣ
ಶಿಕ್ಷಕರ ಹೆಸರು–ರಾಘವೇಂದ್ರ ಪಿ

13. ಸಹನ ಆರ್
ರಾಷ್ಟ್ರೋತ್ಥಾನ ಪ್ರೌಢಶಾಲೆ, ಹ.ಬೊ. ಹಳ್ಳಿ
ಶಿಕ್ಷಕರು–ಎಲ್. ವೆಂಕಟೇಶ್

14. ವೀರಮ್ಮ
ಶ್ರೀ ಗುರು ಶಿವಶಾಂತವೀರ ಪ್ರೌಢಶಾಲೆ,
ಕಡ್ಲಬಾಳು
ಶಿಕ್ಷಕರು–ಪರಶುರಾಮ.ಡಿ

15. ಹೆಚ್. ಕಾವ್ಯ
ಸರ್ಕಾರಿ ಪ್ರೌಢಶಾಲೆ, ತೆಲುಗೋಳಿ
ಶಿಕ್ಷಕರು– ರವೀಂದ್ರ

16. ಎಂ. ಸಮೀನಾ
ಇಂ.ಬಾ.ಪ್ರೌ.ಶಾಲೆ ಹ.ಬೊ.ಹಳ್ಳಿ
ಶಿಕ್ಷಕರು– ಸುನಿತ

**ಹೊಸಪೇಟೆ ತಾಲ್ಲೂಕು**

1. ಎಂ.ಲಕ್ಷ್ಮಿ ಹುಲಿಗೇಶ
ಬಾ.ಸ.ಪ.ಪೂ.ಕಾ, ಪ್ರೌಢಶಾಲಾ ವಿಭಾಗ,
ಹೊಸಪೇಟೆ.
ಶಿಕ್ಷಕರು–ನಾಗರತ್ನ ಸಿ.ಎಸ್

2. ಕೆ.ಅಶ್ವಿನಿ ಚಿದಾನಂದ
ಸ.ಬಾ.ಪ್ರೌಢಶಾಲೆ, ಕಮಲಾಪುರ
ಶಿಕ್ಷಕರು–ಆರ್.ಕೆ.ರಾಜೇಶ್ವರಿ

3. ಎನ್. ಇಂದುಶ್ರೀ
ಸ.ಬಾ.ಪ್ರೌಢಶಾಲೆ (ಮಾಪು) ಹೊಸಪೇಟೆ
ಶಿಕ್ಷಕರು–ರುಕ್ಸಾನ.ವಿ

4. ಗಣೇಶ
ಸರ್ಕಾರಿ ಪ್ರೌಢಶಾಲೆ, ಕಾರಿಗನೂರು
ಶಿಕ್ಷಕರು–ಡಿ.ನಾಗವೇಣಿ

5. ಎಸ್.ಕೆ.ನಿಖಿತಾ
ರಾಣಿಚೆನ್ನಮ್ಮ ಪ್ರೌಢಶಾಲೆ, ಹೊಸಪೇಟೆ.
ಶಿಕ್ಷಕರು–ಸಿಂಧೂಜಾ

6. ಎನ್.ಹುಲಿಗೆಮ್ಮ
ಕೆ.ಜಿ.ಬಿ.ವಿ, ಕಮಲಾಪುರ
ಶಿಕ್ಷಕರು–ಗಾಯತ್ರಿ

7. ರಾಹುಲ್ ಬಿ
ಸರ್ಕಾರಿ ಪ್ರೌಢಶಾಲೆ, ಗುಂಡ
ಶಿಕ್ಷಕರು–ನಾರಾಯಣ ಕೆ

8. ಕೆ.ಪಲ್ಲವಿ
ಬಿ.ಆರ್.ಆರ್.ಜಿ ಪ್ರೌಢಶಾಲೆ,
ಜಿ.ನಾಗಲಾಪುರ
ಶಿಕ್ಷಕರು–ಚನ್ನಬಸವ ಕೆ.ಬಿ

9. ಸಂಗೀತಾ
ಸರ್ಕಾರಿ ಪ್ರೌಢಶಾಲೆ, ಪೋತಲಕಟ್ಟೆ
ಶಿಕ್ಷಕರು–ದೇವರಾಜ್ ಕೇತಾವತ್

10. ಕೆ.ಉಮರ್ ಫಾರೂಕ್
ಸರ್ಕಾರಿ ಪ್ರೌಢಶಾಲೆ, ಅನಂತಶಯನ ಗುಡಿ
ಶಿಕ್ಷಕಿಯ ಹೆಸರು– ಜೆ.ಗಂಗಮ್ಮ

11. ಎಂ.ನಿವೇದಿತಾ
ಸರ್ಕಾರಿ ಪ್ರೌಢಶಾಲೆ, ಕಾಕುಬಾಳು
ಶಿಕ್ಷಕರು– ಶಶಿಧರ ಪಿ.ಎಂ

12. ಕೆ. ಸನಾ
ಸ.ಸಂ.ಪ.ಪೂ.ಕಾಲೇಜ್, ಚಿತ್ತವಾಡಗಿ
ಶಿಕ್ಷಕರು–ವಸುಧ ಡಿ.ಕೆ

13. ಗಣೇಶ ಕುಂಬಾರ
ಸ.ಪ.ಪೂ.ಕಾಲೇಜು, ಕಮಲಾಪುರ
ಶಿಕ್ಷಕರು– ಅಸ್ಮಾತರನ್ನುಂ/ನೆಮ್ಮ ನಾಯ್ಕ

**ಕೊಟ್ಟೂರು ತಾಲೂಕು**

ಯು.ಪ್ರಿಯ
ಮುರಾರ್ಜಿ ಶಾಲೆ, ಅಂಬಳಿ
ಶಿಕ್ಷಕರು–ಕೊಟ್ರೇಶ ನಾಯ್ಕ

**ಕೂಡ್ಲಿಗಿ ತಾಲೂಕು**

ಚೈತ್ರಾ.ಯು
ಹಿರೇಮಠ ಪ್ರೌಢಶಾಲೆ, ಕೂಡ್ಲಿಗಿ
ಶಿಕ್ಷಕರು–ಯಶೋಧ

**ಹರಪನಹಳ್ಳಿ ತಾಲೂಕು**

ಎ. ಭಾರತಿ
ಕೆ.ಪಿ.ಎಸ್ ಶಾಲೆ, ಹಲವಾಗಲು
ಶಿಕ್ಷಕರು– ದೀಪಾ

**ಬಳ್ಳಾರಿ ಜಿಲ್ಲೆ**

ಡಿ. ಕಲ್ಪನಾ
ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ
ಅನುದಾನಿತ ಪ್ರೌಢಶಾಲೆ,
ಬಳ್ಳಾರಿ
ಶಿಕ್ಷಕರು– ಹೆಚ್. ಶೈಲಜ

**ಗದಗ ಜಿಲ್ಲೆ**

ಕುಸುಮ
ಶ್ರೀ ಫಲಹಾರೇಶ್ವರ ಪ್ರೌಢಶಾಲೆ, ಹಸೂಟಿ
ರೋಣ ತಾ. ಗದಗ ಜಿ.
ಶಿಕ್ಷಕರು–ಎಂ.ವಿ ಪ್ರಕಾಶಾರಾಧ್ಯ

**ಶಿವಮೊಗ್ಗ ಜಿಲ್ಲೆ**

ಮನುಕುಮಾರ
ಶ್ರೀ ಮಲ್ಲಿಕಾರ್ಜುನಸ್ವಾಮಿ ಪ್ರೌಢಶಾಲೆ,
ಆಗರದ ಹಳ್ಳಿ
ಭದ್ರಾವತಿ ತಾ. ಶಿವಮೊಗ್ಗ ಜಿ.
ಶಿಕ್ಷಕರು– ಎಂ.ಜಿ ಮಂಜುನಾಥ

## ಕಾಮಗಾರಿಗಳಿಗೆ ಭೂಮಿ ಪೂಜೆ ಅಂಗನವಾಡಿ ಉದ್ಘಾಟನೆ

### ಕ್ಷೇತ್ರದ ಅಭಿವೃದ್ಧಿಗೆ ಭರಪೂರ ಅನುದಾನ: ಶಾಸಕ ಎನ್.ಟಿ.ಶ್ರೀನಿವಾಸ



■ ಹಂಪಿ ಟೈಮ್ಸ್ ಕೂಡ್ಲಿಗಿ

ಕ್ಷೇತ್ರದಾದ್ಯಂತ ಭರಪೂರ ಅಭಿವೃದ್ಧಿ ಕಾಮಗಾರಿಗಳು ನಡೆಯುವಂತೆ ಅನುದಾನವನ್ನು ತರಲಾಗಿದೆ ಎಂದು ಶಾಸಕ ಡಾ.ಎನ್.ಟಿ. ಶ್ರೀನಿವಾಸ್ ಹೇಳಿದರು.

ತಾಲೂಕಿನ ವಿವಿಧ ಗ್ರಾಮಗಳಲ್ಲಿ ರಸ್ತೆ ಅಭಿವೃದ್ಧಿ ಮತ್ತು ಅಂಗನವಾಡಿ ಕೇಂದ್ರಗಳನ್ನು ಉದ್ಘಾಟನೆ ಹಾಗೂ ಭೂಮಿ ಪೂಜೆಯನ್ನು ಮಂಗಳವಾರ ನೆರವೇರಿಸಿ ಮಾತನಾಡಿದರು. ಕೆಲವು ಗ್ರಾಮಗಳಲ್ಲಿ ರಸ್ತೆಗಳು ಸಂಪೂರ್ಣ ಹದಗೆಟ್ಟು ಹೋಗಿರುವುದನ್ನು ಗಮನಿ ಸಿದ್ದೆ, ತಾಲೂಕಿನ ಮಡಕಲಕಟ್ಟೆ ಗ್ರಾಮದಿಂದ ಗುಂಡುಮುಣುಗು–ಓಬಳಶೆಟ್ಟಿಹಳ್ಳಿ ಕೂಡು ರಸ್ತೆ ಅಭಿವೃದ್ಧಿ ಕಾಮಗಾರಿ 3743 ಲಕ್ಷ ಕೆ.ಕೆ.ಆರ್.ಡಿ.ಬಿ. ಅನುದಾನದಿಂದ ಪಂ.ರಾ.ಇಂಜಿನೀಯರಿಂಗ್ ಇಲಾಖೆಯಿಂದ ಅನುಷ್ಠಾನಗೊಳಿಸಲಾಗಿದೆ. ರಸ್ತೆಯಲ್ಲಿ ದ್ವಿಚಕ್ರವಾಹನ ಸವಾರರಿಗೆ, ಪ್ರತಿ ನಿತ್ಯ ಸಾರ್ವಜನಿಕರು ಸಂಚರಿಸುವ ರಸ್ತೆ ಯಾದ್ದರಿಂದ, ಅಭಿವೃದ್ಧಿ ಇಂದಿನಿಂದಲೇ, ಆರಂಭಿಸಲಾಗಿದೆ. ಹುರುಳಿಹಾಳು ಗ್ರಾಮದಿಂದ ಕೊರಚರಹಟ್ಟಿ ಕ್ರಾಸ್‌ವರೆಗೂ, ಗ್ರಾಮೀಣ ರಸ್ತೆಗಳ ಅಭಿವೃದ್ಧಿಯಿಂದ 100 ಲಕ್ಷ ಅನುದಾನದಲ್ಲಿ ರಸ್ತೆ ಅಭಿವೃದ್ಧಿ ಕೈಗೊಳ್ಳಲಾಗುವುದು. ಬಣವಿಕಲ್ಲು ಗ್ರಾಮದ ಕೆ.ಜಿ.ಬಿ.ವಿ ಬಾಲಕಿಯರ ವಸತಿ ನಿಲಯದಲ್ಲಿ ಡಾರ್‌ಮಿಟರಿ ಕಟ್ಟಡ ನಿರ್ಮಾಣಕ್ಕೆ 108ಲಕ್ಷ, ಡಿಎಂಎಫ್ ಫಂಡ್ 22ಲಕ್ಷಗಳಲ್ಲಿ ಸೂಲದಹಳ್ಳಿ ಶಾಲೆಗೆ ಭೋಜನಾಲಯ, ಕೆಕೆಆರ್‌ಡಿಬಿ ಓಬಳಶೆಟ್ಟಿಹಳ್ಳಿ 18ಲಕ್ಷ, ಹೊಸಹಟ್ಟಿ ಅಂಗನವಾಡಿ–ಎ ಕೇಂದ್ರಕ್ಕೆ 18ಲಕ್ಷ, ಅಂಗನವಾಡಿ–ಬಿ ಕೇಂದ್ರಕ್ಕೆ 20ಲಕ್ಷ ಅನುದಾನಗಳಲ್ಲಿ ಅಂಗನವಾಡಿ ಹೊಸಕಟ್ಟಡಗಳನ್ನು ಉದ್ಘಾಟಿಸಿದ್ದೇನೆ. ಇದರಿಂದ ಪುಟ್ಟ ಮಕ್ಕಳಿಗೆ ಪೌಷ್ಠಿಕ ಆಹಾರ ಸೇವಿಸುವುದರ ಮೂಲಕ ಮಕ್ಕಳ ಕಲಿಕೆಗೆ ಆಧ್ಯತೆ ನೀಡಲಾಗುವುದರಿಂದ ಸುಸಜ್ಜಿತ ಕಟ್ಟಡಗಳು ಅವಶ್ಯಕತೆ ಇತ್ತು, ಈಗ ಅದನ್ನು ಈಡೇರಿಸಲಾಗಿದೆ ಎಂದರು. ಭೀಮಸಮುದ್ರ ಗ್ರಾಮ ಎಸ್.ಸಿ ಕಾಲೋನಿಗೆ ಸಿಸಿ ರಸ್ತೆಗೆ 20ಲಕ್ಷ, ಸಿದ್ದಾಪುರ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಸಿಸಿ ರಸ್ತೆಗೆ 30ಲಕ್ಷ, ಎಂ.ಬಿ.ಅಯ್ಯನಹಳ್ಳಿ–ಮೀನಕೆರೆ ಮುಖ್ಯರಸ್ತೆಯಿಂದ ಕುರಿಹಟ್ಟಿ ಕೂಡು ರಸ್ತೆ ಡಾಂಬರೀಕರಣ ಕಾಮಗಾರಿಗಾರಿಗೆ 37.25ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಹತ್ತು ಹಲವಾರು ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸುವ ಮೂಲಕ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಮುಂದಾಗಿದ್ದೇನೆ ಎಂದರು.

ಲೋಕೋಪಯೋಗಿ ಇಲಾಖೆಯ ಎಇಇ ಕೆ.ನಾಗನಗೌಡ, ಜಿಪಂ ಇಂಜಿನಿಯರಿಂಗ್ ಇಲಾಖೆಯ ಮಲ್ಲಿಕಾರ್ಜುನ ಗುತ್ತಿಗೆದಾರರು, ಶಾಸಕರ ನಿಕಟವರ್ತಿ ಎಂ. ಮರುಳಸಿದ್ಧಪ್ಪ, ಮಣಿ, ಸೇರಿದಂತೆ ಆಯಾ ಗ್ರಾಮದ ಮುಖಂಡರು ಇದ್ದರು.

## ವಿಶ್ವ ಕ್ಯಾನ್ಸರ್ ದಿನಾಚರಣೆ : ಜಾಗೃತಿ ಜಾಥದಲ್ಲಿ ಡಿಹೆಚ್‌ಓ ಡಾ.ಯಲ್ಲಾ ರಮೇಶ್ ಬಾಬು ಮನವಿ ದುಶ್ಚಟಗಳಿಂದ ದೂರವಿರಿ



■ ಹಂಪಿ ಟೈಮ್ಸ್ ಬಳ್ಳಾರಿ

ಸಾರ್ವಜನಿಕರು ಬೀಡಿ ಸೇದುವುದು, ತಂಬಾಕು ಗುಟ್ಕಾ ಜಗಿಯುವುದು, ಮದ್ಯ ಸೇವನೆ ಸೇರಿದಂತೆ ದುಷ್ಚಟಗಳಿಂದ ದೂರವಿರಬೇಕು ಎಂದು ಡಿಎಚ್‌ಒ ಡಾ.ಯಲ್ಲಾ ರಮೇಶ್ ಬಾಬು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ 'ವಿಶಿಷ್ಟತೆಯಿಂದ ಏಕತೆ' ಎಂಬ ಘೋಷವಾಕ್ಯದೊಂದಿಗೆ "ವಿಶ್ವ ಕ್ಯಾನ್ಸರ್ ದಿನಾಚರಣೆ" ಅಂಗವಾಗಿ ಜಿಲ್ಲಾ ಆಸ್ಪತ್ರೆ ಆವರಣದಿಂದ ಮಂಗಳವಾರ ಹಮ್ಮಿಕೊಂಡಿದ್ದ ಜನಜಾಗೃತಿ ಜಾಥಾಗೆ ಚಾಲನೆ ನೀಡಿ ಮಾತನಾಡಿದರು. ಕ್ಯಾನ್ಸರ್‌ನಲ್ಲಿ ಸುಮಾರು ವಿಧಗಳಿವೆ. ಅವುಗಳಲ್ಲಿ ಚರ್ಮದ ಕ್ಯಾನ್ಸರ್, ಸ್ತನ ಕ್ಯಾನ್ಸರ್, ಶ್ವಾಸಕೋಶದ ಕ್ಯಾನ್ಸರ್, ಪ್ರಾಸ್ಟೇಟ್ ಕ್ಯಾನ್ಸರ್, ಕೊಲೊರೆಕ್ಟಲ್ ಕ್ಯಾನ್ಸರ್, ಮೆಲನೋಮ, ಲಿಂಫೋಮ ಕ್ಯಾನ್ಸರ್ ಮತ್ತು ಮೂತ್ರಪಿಂಡದ ಕ್ಯಾನ್ಸರ್‌ಗಳಿವೆ. ಆದರೆ ಬಾಯಿ, ಗರ್ಭಾಶಯ ಮತ್ತು ಸ್ತನ ಕ್ಯಾನ್ಸರ್ ಹೆಚ್ಚಾಗಿ ಕಂಡು ಬರುತ್ತವೆ. ಕ್ಯಾನ್ಸರ್ ಖಾಯಿಲೆಯ ಬಗ್ಗೆ ಜಾಗೃತಿ ಮತ್ತು ಅರಿವು ಹೊಂದಬೇಕು. ಕ್ಯಾನ್ಸರ್ ಚಿಕಿತ್ಸೆಗೆ ಬಿಮ್ಸ್ ನಲ್ಲಿ ಚಿಕಿತ್ಸಾ ಸೌಲಭ್ಯವಿದ್ದು, ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಜಿಲ್ಲಾ ಸಾಂಕ್ರಾಮಿಕ ರೋಗಗಳ ನಿಯಂತ್ರಣ ಕಾರ್ಯಕ್ರಮ ಅಧಿಕಾರಿ ಹಾಗೂ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ.ವಿ.ಕೆ ಪ್ರಾಸ್ತಾವಿಕವಾಗಿ ಮಾತನಾಡಿ, 2000 ರ ಫೆ.04 ರಂದು ಪ್ಯಾರಿಸ್ ದೇಶದಲ್ಲಿ ಮೊದಲ ಬಾರಿಗೆ ವಿಶ್ವ ಕ್ಯಾನ್ಸರ್ ದಿನ ಆಚರಿಸಲಾಯಿತು. ಕ್ಯಾನ್ಸರ್ ಪೀಡಿತ ರೋಗಿಗಳಿಗೆ ಆತ್ಮಸ್ಥೈರ್ಯ ತುಂಬುವುದು ಇದರ ಉದ್ದೇಶವಾಗಿತ್ತು ಎಂದು ಹೇಳಿದರು.

ಇಂದು ಅಧುನಿಕ ಜೀವನ ಶೈಲಿಗಳಿಂದ ತಂಬಾಕು ಬಳಕೆಯಿಂದ ಅನೇಕ ರೀತಿಯ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುತ್ತಿದ್ದಾರೆ. ಪ್ರಸುತ್ತ ಆಧುನಿಕ ತಂತ್ರಜ್ಞಾನದಿಂದ ಕ್ಯಾನ್ಸರ್ ರೋಗವನ್ನು ಆರಂಭಿಕ ಹಂತಗಳಲ್ಲಿ ಪತ್ತೆಮಾಡಬೇಕು. ಖಚಿತ ಪಟ್ಟಲ್ಲಿ ಸಂಪೂರ್ಣವಾಗಿ ಚಿಕಿತ್ಸೆ ನೀಡಿ ಗುಣಮುಖಗೊಳಿಸಬಹುದು ಎಂದರು.

ಮುಂದಿನ ದಿನಗಳಲ್ಲಿ ಜಿಲ್ಲಾ ಆಸ್ಪತ್ರೆಯಲ್ಲಿಯೇ ಕೀಮೋಥೆರಫಿ ಸೌಲಭ್ಯ ಆರಂಭವಾಗಲಿದೆ. ಮಾರ್ಚ್ ತಿಂಗಳಲ್ಲಿ ಗೃಹ ಆರೋಗ್ಯ ಕರ್ನಾಟಕ ಕಾರ್ಯಕ್ರಮದಡಿ ಮನೆ–ಮನೆ ಭೇಟಿ ನೀಡಿ ಸಾಂಕ್ರಮಿಕ ರೋಗಗಳ ತಪಾಸಣೆ ಕೈಗೊಳ್ಳಲಾಗುವುದು. ಸಾರ್ವಜನಿಕರು ಜಾಗೃಕರಾಗಿ ಕ್ಯಾನ್ಸರ್ ಲಕ್ಷಣಗಳಿನುಸಾರವಾಗಿ ತಪಾಸಣೆಗೆ ಒಳಪಟ್ಟು ಕ್ಯಾನ್ಸರ್ ಮುಕ್ತ ಸಮಾಜ ನಿರ್ಮಿಸಲು ಕೈಜೋಡಿಸಬೇಕು ಎಂದು ತಿಳಿಸಿದರು.

**ಅರಿವು ಮೂಡಿಸಿದ ಜಾಥಾ:**

ಜನ ಜಾಗೃತಿ ಜಾಥಾವು ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿತು. ಘೋಷಣೆ ಹಾಕುತ್ತಾ ಕ್ಯಾನ್ಸರ್ ರೋಗದ ಕುರಿತು ಅರಿವು ಮೂಡಿಸಲಾಯಿತು.

ಇದೇ ವೇಳೆ ಕ್ಯಾನ್ಸರ್ ಕುರಿತ ಜಾಗೃತಿ ಭಿತ್ತಿಪತ್ರಗಳನ್ನು ಗಣ್ಯರು ಬಿಡುಗಡೆಗೊಳಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ, ಕ್ಯಾನ್ಸರ್ ತಜ್ಞರಾದ ಡಾ.ವಿಘ್ನೇಶ್.ಎಸ್., ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಹನುಮಂತಪ್ಪ, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಇಂದ್ರಾಣಿ, ಜಿಲ್ಲಾ ಕುಟುಂಬ ಕಲ್ಯಾಣ ಅನುಷ್ಠಾನಾಧಿಕಾರಿ ಡಾ.ಪೂರ್ಣಿಮಾ ಕಟ್ಟಿಮನಿ, ಜಿಲ್ಲಾ ಕುಷ್ಟರೋಗ ನಿಯಂತ್ರಣಾಧಿಕಾರಿ ಡಾ.ವೀರೇಂದ್ರ ಕುಮಾರ್ ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಭಾಗವಹಿಸಿದ್ದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಪುನರ್‌ಮನನ ಮಾಡಿ

HAMPI TIMES MARGADARSHI

ಪರೀಕ್ಷೆಗೆ ನಾವು ಸಿದ್ಧ 44 ದಿನ

ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು

https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಗಣಿತ

### ಪಾಸಿಂಗ್ ಪತ್ರಿಕೆ – 1

ಗಣಿತ ಪಾಸಾಗಲು ಅತೀ ಸುಲಭವಾಗಿ ಕಲಿಯಬೇಕಾದ ಅಂಶಗಳನ್ನು ನೀಡುತ್ತಿದ್ದೇವೆ. ಕಲಿತು ಪಾಸಾಗಿರಿ

1) $\sqrt{3}$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ.
2) 12, 28 ಮತ್ತು 120 ಇವುಗಳ ಮ.ಸಾ.ಅ. ಮತ್ತು ಲ.ಸಾ.ಅ.ಗಳನ್ನು ಅವಿಭಾಜ್ಯ ಅಪವರ್ತನ ವಿಧಾನದಿಂದ ಕಂಡುಹಿಡಿಯಿರಿ.
3) $p(x) = x^2 - 2x - 8$ ಈ ಬಹುಪದೋಕ್ತಿಗಳ ಶೂನ್ಯತೆಗಳನ್ನು ಕಂಡುಹಿಡಿಯಿರಿ ಮತ್ತು ಸಹಗುಣಕಗಳ ನಡುವಿನ ಸಂಬಂಧವನ್ನು ತಾಳೆ ನೋಡಿ
4) ವರ್ಜಿಸುವ ವಿಧಾನದಿಂದ ಬಿಡಿಸಿರಿ.
$x + y = 5$ ಮತ್ತು $2x - 3y = 5$
5) ನಕ್ಷಾ ವಿಧಾನದಿಂದ ಬಿಡಿಸಿರಿ.
$x + y = 6$ ಮತ್ತು $2x + y = 10$
6) $x^2 - 7x + 12 = 0$ ಈ ವರ್ಗಸಮೀಕರಣದ ಮೂಲವನ್ನು ಅಪವರ್ತನ ವಿಧಾನದಿಂದ ಕಂಡುಹಿಡಿಯಿರಿ.
7) $x^2 - 3x - 10 = 0$ ಈ ವರ್ಗಸಮೀಕರಣದ ಮೂಲವನ್ನು ಸೂತ್ರ ವಿಧಾನದಿಂದ ಕಂಡುಹಿಡಿಯಿರಿ.
8) 5,9,13.......ಈ ಸಮಾಂತರ ಶ್ರೇಢಿಯ 17ನೇ ಪದವನ್ನು ಸೂತ್ರ ಉಪಯೋಗಿಸಿ ಕಂಡುಹಿಡಿಯಿರಿ.
9) 6,13,20 ...........ಈ ಸಮಾಂತರ ಶ್ರೇಢಿಯ ಮೊದಲ 30 ಪದವನ್ನು ಮೊತ್ತವನ್ನು ಸೂತ್ರ ಉಪಯೋಗಿಸಿ ಕಂಡುಹಿಡಿಯಿರಿ.
10) ಒಂದು ಸಮಾಂತರ ಶ್ರೇಢಿಯ ಮೊದಲ 9 ಪದಗಳ ಮೊತ್ತ 144 ಮತ್ತು 9 ನೇ ಪದವು 28 ಆದಾಗ ಈ ಸಮಾಂತರ ಶ್ರೇಢಿಯ ಮೊದಲ ಪದ ಹಾಗೂ ಸಾಮಾನ್ಯ ವ್ಯತ್ಯಾಸ ಕಂಡುಹಿಡಿಯಿರಿ.
11) "ಎರಡು ತ್ರಿಭುಜಗಳಲ್ಲಿ ಅನುರೂಪ ಕೋನಗಳು ಸಮವಾದರೆ ಅವುಗಳ ಅನುರೂಪ ಬಾಹುಗಳ ಅನುಪಾತಗಳು ಸಮ (ಅಥವಾ ಸಮಾನುಪಾತ) ದಲ್ಲಿದ್ದರೆ, ಆ ತ್ರಿಭುಜಗಳು ಸಮರೂಪವಾಗಿರುತ್ತವೆ." ಎಂದು ಸಾಧಿಸಿ.
12) (7,-5) ಮತ್ತು (3,5) ಬಿಂದುಗಳ ನಡುವಿನ ದೂರವನ್ನು ಕಂಡುಹಿಡಿಯಿರಿ.
13) ಮೂಲಬಿಂದು ಮತ್ತು (-5,4) ಬಿಂದುಗಳ ನಡುವಿನ ದೂರವನ್ನು ಕಂಡುಹಿಡಿಯಿರಿ.
14) (9, 4) ಮತ್ತು (-5, 6) ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯಬಿಂದುವಿನ ಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ.
15) (-2, 6) ಮತ್ತು (3, -6) ಬಿಂದುಗಳನ್ನು ಸೇರಿಸುವ ರೇಖಾಖಂಡವನ್ನು ಆಂತರಿಕವಾಗಿ 1 : 3 ರ ಅನುಪಾತದಲ್ಲಿ ವಿಭಾಗಿಸುವ ಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ.
16) $\cos\theta = \frac{6}{10}$ ಆದರೆ $\sec\theta$ ಮತ್ತು $\tan\theta$ ದ ಬೆಲೆ ಕಂಡುಹಿಡಿಯಿರಿ.
17) $\frac{1+\sin\theta}{\cos\theta} + \frac{1-\sin\theta}{\cos\theta} = 2\sec\theta$ ಎಂದು ಸಾಧಿಸಿ
18) $\sqrt{\frac{1-\sin\theta}{1+\sin\theta}} = \sec\theta - \tan\theta$ ಎಂದು ಸಾಧಿಸಿ
19) "ಬಾಹ್ಯ ಬಿಂದುವಿನಿಂದ ವೃತ್ತಕ್ಕೆ ಎಳೆದ ಸ್ಪರ್ಶಕಗಳ ಉದ್ದವು ಸಮನಾಗಿರುತ್ತದೆ" ಎಂದು ಸಾಧಿಸಿ.
20) 'O' ಕೇಂದ್ರವಿರುವ ವೃತ್ತದ ಪರಿಧಿಯು 24 ಸೆಂ.ಮೀ ಆಗಿದೆ. ಆ ವೃತ್ತದ ಒಂದು ಕಂಸದಿಂದ ಉಂಟಾದ ಕೋನವು $30^0$ ಆಗಿದ್ದರೆಕಂಸದ ಉದ್ದವನ್ನು ಕಂಡುಹಿಡಿಯಿರಿ
21) ಈ ಕೆಳಗಿನ ದತ್ತಾಂಶಗಳಿಗೆ ನೇರ ವಿಧಾನದಿಂದ ಸರಾಸರಿ, ಮಧ್ಯಾಂಕ ಮತ್ತು ಬಹುಲಕವ
ನ್ನು ಕಂಡುಹಿಡಿಯಿರಿ.

| ವರ್ಗಾಂತರ | 10-20 | 20-30 | 30-40 | 40-50 | 50-60 |
|---|---|---|---|---|---|
| ಆವೃತ್ತಿ | 4 | 7 | 8 | 6 | 3 |

"ಇಂದಿನ ಪರಿಶ್ರಮವೇ ನಾಳಿನ ಯಶಸ್ಸು"

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಎಂ.ಎಸ್.ಮಂಜುನಾಥ, ಶಿಕ್ಷಕರು, ಚಿಲುಗೋಡು, ಹಗರಿಬೊಮ್ಮನಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

Greetings
Ads Starts from Rs.1000
94486 33038

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ

ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.

Only Admins can Send Messages to this Group

Join with Us


# ಸಂಘಟಿತರಾಗಿ ಸೌಲಭ್ಯ ಪಡೆಯಿರಿ

## ಶ್ರೀ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮ – ಪ.ಪಂ. ಅಧ್ಯಕ್ಷ ಆದಿಮನಿ ಹುಸೇನ್ ಭಾಷ ಹೇಳಿಕೆ



■ **ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಸವಿತಾ ಸಮಾಜ ಹಿಂದುಳಿದ ಸಮಾಜವಾಗಿದ್ದು, ಸಂಘಟಿತರಾಗಿ ಸರ್ಕಾರದ ಸೌಲಭ್ಯಗಳನ್ನು ಬಳಸಿಕೊಂಡು ಆರ್ಥಿಕ, ಸಮಾಜಿಕ ಹಾಗೂ ಶೈಕ್ಷಣಿಕವಾಗಿ ಬೆಳೆಯಬೇಕು ಎಂದು ಪ.ಪಂ ಅಧ್ಯಕ್ಷ ಆದಿಮನಿ ಹುಸೇನ್ ಭಾಷ ಹೇಳಿದರು.

ಪಟ್ಟಣದ ಸವಿತಾ ಸಮಾಜದ ಸಮುದಾಯ ಭವನದಲ್ಲಿ ಮಂಗಳವಾರ ನಡೆದ ಶ್ರೀ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಮರಿಯಮ್ಮನಹಳ್ಳಿಯ ಸವಿತಾ ಸಮಾಜಕ್ಕೆ ಈ ಹಿಂದೆ ಸಮುದಾಯ ಭವನ ನಿರ್ಮಾಣಕ್ಕೆ ಮಾಜಿ ಶಾಸಕ ಎಸ್. ಭೀಮಾನಾಯ್ಕ ಅವರು 5 ಲಕ್ಷ ರು.ಗಳ ವೆಚ್ಚದಲ್ಲಿ ಸಮುದಾಯ ಭವನವನ್ನು ನಿರ್ಮಿಸಿಕೊಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಸವಿತಾ ಸಮಾಜಕ್ಕೆ ನಿವೇಶವನ್ನು ಒದಗಿಸಲು ಪ್ರಯತ್ನಿಸಲಾಗುವುದು ಎಂದು ಅವರು ಹೇಳಿದರು.

ಸವಿತಾ ಸಮಾಜದ ಗೌರವಾಧ್ಯಕ್ಷ ಹಾಗೂ ನಿವೃತ್ತ ಶಿಕ್ಷಕ ಕೆ.ನಾಗೇಶ್ ಮಾತನಾಡಿ, ಸವಿತಾ ಮಹರ್ಷಿಯು ರಥಸಪ್ತಮಿಯ ದಿನ ಮಾಘ ಮಾಸದ ಶುಕ್ಲ ಪಕ್ಷದಲ್ಲಿ ಜನಿಸಿದರು. ಧಾರ್ಮಿಕವಾಗಿ ಶಿವನ ಎಡಗಣ್ಣನ್ನು ಚಂದ್ರನಿಗೆ ಬಲಗಣ್ಣನ್ನು ಸೂರ್ಯನಿಗೆ ಹೋಲಿಸಲಾಗುತ್ತದೆ. ಶಿವನ ಬಲಗಣ್ಣಿನಿಂದ ಜನಿಸಿದವನೇ ಸವಿತಾ ಮಹರ್ಷಿ ಎಂದು ಪ್ರತಿತಿಯಿದೆ ಎಂದು ವಿವರಿಸಿದರು.

ಅಪಾರ ಜ್ಞಾನಭಂಡಾರ ಹೊಂದಿದ ಸವಿತಾ ಮಹರ್ಷಿಗಳು ನಾಲ್ಕನೇ ವೇದವಾದ ಸಾಮವೇದ ಕೃತಿ ರಚಿಸಿದ್ದಾರೆ. ಇವರ ಮಗಳಾದ ಗಾಯತ್ರಿ ದೇವಿಯು ಶ್ರೇಷ್ಠಮಂತ್ರವಾದ ಗಾಯತ್ರಿ ಮಂತ್ರವನ್ನು ರಚಿಸಿದ್ದಾರೆ ಎಂದರು.

ಸವಿತಾ ಮಹರ್ಷಿಗಳು ಸಮಾಜಮುಖಿಯಾಗಿ ಬೆಳೆದು ದಾರಿದೀಪವಾಗಿದ್ದಾರೆ. ಅತ್ಯಂತ ಶ್ರೀಮಂತ ಪರಂಪರೆ ಇರುವ ಸವಿತಾ ಸಮಾಜ ಒಗ್ಗಟ್ಟಾಗಿ ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಮಾಜಿಕವಾಗಿ ಇತರರಿಗೆ ಆದರ್ಶ ಪ್ರಾಯರಾಗಿ ಬೆಳೆಯಬೇಕು ಎಂದು ಅವರು ಹೇಳಿದರು.

ಸ್ಥಳೀಯ ಪಟ್ಟಣ ಪಂಚಾಯಿತಿ ಸದಸ್ಯೆ ಅಶ್ವಿನಿ ನಾಗರಾಜ ಸಭೆಯಲ್ಲಿ ಮಾತನಾಡಿದರು. ಸವಿತಾ ಸಮಾಜದ ಅಧ್ಯಕ್ಷ ಸಿ.ಕೆ. ರಾಮುಡು ಸಮಾರಂಭದ ಅಧ್ಯಕ್ಷತೆವಹಿಸಿಕೊಂಡಿದ್ದರು. ಪಟ್ಟಣ ಪಂಚಾಯಿತಿ ಸದಸ್ಯರಾದ ಎಲ್. ವಸಂತ, ಸ್ಥಳೀಯ ಮುಖಂಡ ರೋಗಾಣಿ ಮಂಜುನಾಥ, ಸವಿತಾ ಸಮಾಜದ ಮಾಜಿ ಅಧ್ಯಕ್ಷ ಕೆ. ತಮ್ಮಣ್ಣ, ಸವಿತಾ ಸಮಾಜದ ಮಹಿಳಾ ಮುಖಂಡರಾದ ಶಿವಮ್ಮ, ಕೃಷ್ಣಮ್ಮ ಸೇರಿದಂತೆ ಸವಿತಾ ಸಮಾಜದ ಮುಖಂಡರು ಸಭೆಯಲ್ಲಿ ಭಾಗವಹಿಸಿದ್ದರು. ಅನಿಲ್ ಆಚಾರಿ ಪ್ರಾರ್ಥಿಸಿದರು. ಪ್ರಕೃತಿ ಎನ್. ದೇವನಕೊಂಡ ಸ್ವಾಗತಿಸಿದರು. ಪಿ. ಯೋಗೇಶ್ ನಿರೂಪಿಸಿದರು.

# ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ: ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 2024–25ನೇ ಸಾಲಿಗೆ ಪರಿಶಿಷ್ಟ ಪಂಗಡದ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಹೊಸ ಎನ್‌ಜಿಓ ಸಂಸ್ಥೆಗಳು ಕೇಂದ್ರ ಸರ್ಕಾರದ ಸಹಾಯಧನ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಎನ್‌ಜಿಓ ಪೋರ್ಟಲ್ ಟಿರಂ.ಣಡುಭಚಿಟ.ರಂತ.ಎಟಿಗೆ ಭೇಟಿ ನೀಡಬಹುದು. ಫೆ.15 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿರುತ್ತದೆ.

ಕೇಂದ್ರ ಸರ್ಕಾರ ಹೊರಡಿಸಿರುವ ಪರಿಷ್ಕೃತ ಮಾರ್ಗಸೂಚಿಯನ್ವಯ ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳ ತಪಾಸಣಾ ವರದಿಯ ಶಿಫಾರಸ್ಸಿನೊಂದಿಗೆ ದೃಢೀಕೃತ ಪ್ರತಿಯನ್ನು ರಾಜ್ಯದ ಶಿಫಾರಸ್ಸಿನೊಂದಿಗೆ 45 ದಿನಗಳೊಳಗಾಗಿ ಪ್ರಸ್ತಾವನೆಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಿ ಹಾಗೂ ಹಾರ್ಡ್ ಕಾಪಿಯನ್ನು ಸಹ ಸಲ್ಲಿಸಬೇಕಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ನಗರದ ವಾಲ್ಮೀಕಿ ಭವನದ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ಅಥವಾ ಬಳ್ಳಾರಿ, ಸಂಡೂರು, ಸಿರುಗುಪ್ಪ ತಾಲ್ಲೂಕುಗಳ ತಾಲ್ಲೂಕು ಪರಿಶಿಷ್ಟವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಗೆ ಸಂಪರ್ಕಿಸಬಹುದು ಎಂದು ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಪಿಎಫ್‌ಓ: ಫೆ.13 ಪಿಂಚಣಿ ಅದಾಲತ್

■ **ಹಂಪಿ ಟೈಮ್ಸ್ ಬಳ್ಳಾರಿ**

ಕಾರ್ಮಿಕರ ಭವಿಷ್ಯ ನಿಧಿ ಸಂಸ್ಥೆಯ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಪಿಂಚಣಿದಾರರ ಕುಂದು ಕೊರತೆ ಆಲಿಸಿ, ಪರಿಹರಿಸಲು ಫೆ.13 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 01 ಗಂಟೆಯವರೆಗೆ ನಗರದ ಪ್ರಾದೇಶಿಕ ಕಚೇರಿಯಲ್ಲಿ ಪಿಂಚಣಿ ಅದಾಲತ್ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಪ್ರಾದೇಶಿಕ ಕಚೇರಿಯ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತ ಕೆ.ವೆಂಕಟ ಸುಬ್ಬಯ್ಯ ಅವರು ತಿಳಿಸಿದ್ದಾರೆ.

ಬಳ್ಳಾರಿ, ವಿಜಯನಗರ, ಕೊಪ್ಪಳ, ಚಿತ್ರದುರ್ಗ ಜಿಲ್ಲೆಗಳ ಪಿಂಚಣಿದಾರರು ತಮ್ಮ ಕುಂದುಕೊರತೆಗಳಿದ್ದಲ್ಲಿ ಬಳ್ಳಾರಿ ಪ್ರಾದೇಶಿಕ ಕಚೇರಿಯ ಸಾರ್ವಜನಿಕ ಸಂಪರ್ಕ ಅಧಿಕಾರಿಗೆ ಪತ್ರ ಅಥವಾ ಇ-ಮೇಲ್ ಮೂಲಕ ಪಿ.ಪಿ.ಓ ಸಂಖ್ಯೆ, ವಿಳಾಸ, ದೂರವಾಣಿ, ಮೊಬೈಲ್ ಸಂಖ್ಯೆ ಮತ್ತು ಕುಂದು ಕೊರತೆಯ ಸ್ವರೂಪವ ಹಾಗೂ ಇತ್ಯಾದಿಗಳನ್ನು ಫೆ.10 ರೊಳಗಾಗಿ ತಿಳಿಸಬಹುದು. ಪತ್ರ ಲಕೋಟೆ ಮೇಲೆ ಪಿಂಚಣಿ ಅದಾಲತ್ ಎಂದು ಬರೆಯಬೇಕು. ಹೆಚ್ಚಿನ ಮಾಹಿತಿಗಾಗಿ ದೂ.08392–268943 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹಂಪಿಯಲ್ಲಿ ಅನಾಮಧೇಯ ವ್ಯಕ್ತಿ ಸಾವು : ಪ್ರಕರಣ ದಾಖಲು

■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿಯ ವಿರೂಪಾಕ್ಷ ದೇವಸ್ಥಾನದ ಬಳಿ ಸುಮಾರು 60–65 ವರ್ಷದ ವ್ಯಕ್ತಿಯೋರ್ವ ಕುಸಿದು ಬಿದ್ದಿದ್ದು ಸ್ಥಳೀಯ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಕೊಪ್ಪಳ ಜಿಲ್ಲಾ ಆಸ್ಪತ್ರೆಗೆ ಶಿಫಾರಸ್ಸು ಮಾಡಿ ರವಾನಿಸಲಾಗಿತ್ತು, ನಾಲ್ಕು ದಿನದ ಬಳಿಕ ಚಿಕಿತ್ಸೆಗೆ ಸ್ಪಂದಿಸದೇ ಆಸ್ಪತ್ರೆಯಲ್ಲಿ ಮೃತಪಟ್ಟಿರುವ ಹಿನ್ನಲೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಹಂಪಿ ಪ್ರವಾಸಿ ಠಾಣಾಧಿಕಾರಿ ಶಿವಕುಮಾರನಾಯ್ಕ ತಿಳಿಸಿದ್ದಾರೆ.

**ಮೃತ ವ್ಯಕ್ತಿ ಚಹರೆ ವಿವರ** : 6 ಅಡಿ ಎತ್ತರ, ಗೋಧಿ ಬಣ್ಣ ಹೊಂದಿರುತ್ತಾನೆ. ತುಂಬು ತೋಳಿನ ಅಂಗಿ, ಕೊಳಪಟ್ಟಿಯಲ್ಲಿ ಕಾಳಿದಾಸ ಟೈಲರ್ ಬಿಎಲ್‌ವೈ ಎಂಬ ಲೇಬಲ್ ಇದೆ. ಒಂದು ಬೆತ್ತದ ಊರುಗೋಲು ಇದೆ ಎಂದು ಮಾಹಿತಿ ನೀಡಲಾಗಿದೆ. ಮೃತ ವ್ಯಕ್ತಿಯ ವಾರಸುದಾರರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಹಂಪಿ ಪ್ರವಾಸಿ ಪೊಲೀಸ್ ಠಾಣೆಯ ಡಿಎಸ್‌ಪಿ ರವರ ದೂ.ಸಂ: 08394–24204, ಸಿಪಿಐ ರವರ ದೂ.ಸಂ: 08394–241530 ಪಿಎಸ್‌ಐ ರವರ ದೂ.ಸಂ: 08394–241530, ಎಸ್‌ಪಿರವರ ಮೊ.ಸಂ: 9480805700 ಸಂಖ್ಯೆಗೆ ಕರೆ ಮಾಡಿ ಸಂಪರ್ಕಿಸಬಹುದು.


ForAds:9448633038


## ಮೈಕ್ರೋ ನ್ಯೂಸ್

# ಹಾಸ್ಟೆಲ್ ಬಳಕೆಗೆ ಖಾಸಗಿ ಕಟ್ಟಡ ಬೇಕಾಗಿದೆ

**ಹಂಪಿ ಟೈಮ್ಸ್ ಹೊಸಪೇಟೆ**

ಸಮಾಜ ಕಲ್ಯಾಣ ಇಲಾಖೆಯ ಡಾ.ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯಕ್ಕಾಗಿ ಕಮಲಾಪುರ ಮತ್ತು ಮರಿಯಮ್ಮನಹಳ್ಳಿಯಲ್ಲಿ ಖಾಸಗಿ ಕಟ್ಟಡ ಬಾಡಿಗೆ ಅಧಾರದಲ್ಲಿ ಅಗತ್ಯವಿದ್ದು ಆಸಕ್ತ ಕಟ್ಟಡ ಮಾಲೀಕರಿಂದ ಅರ್ಜಿ ಅಹ್ವಾನಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ಶಾಹೇಖಾ ಅಹ್ಮದಿ ತಿಳಿಸಿದ್ದಾರೆ.

ವಿದ್ಯಾರ್ಥಿ ನಿಲಯಗಳಲ್ಲಿ ತಲಾ 100 ವಿದ್ಯಾರ್ಥಿಗಳ ವಾಸ್ತವ್ಯಕ್ಕೆ ಅನುಕೂಲವಾಗುವಂತೆ, ಅಗತ್ಯ ಅಡುಗೆ ಕೋಣೆ, ಡೈನಿಂಗ್ ಹಾಲ್, 10 ವಿದ್ಯಾರ್ಥಿಗಳ ಕೊಠಡಿ, ಆಫೀಸ್ ಕೊಠಡಿ, 10 ಸ್ನಾನ ಕೊಠಡಿ, 10 ಶೌಚಗೃಹಗಳು, 2 ಸ್ಟೋರ್ ರೂಂ, ಬಟ್ಟೆ ಹೊಗೆಯುವ ದೋಬಿ ಘಾಟ್, ಬೋರ್ ವೆಲ್ ವ್ಯವಸ್ಥೆ ಹೊಂದಿರುವ ಕಟ್ಟಡಗಳಿಗೆ ಹೆಚ್ಚಿನ ಆದ್ಯತೆ ನೀಡಿ, ಲೋಕೋಪಯೋಗಿ ಇಲಾಖೆಯ ನಿಯಮಾನುಸಾರ ನಿಗಧಿಪಡಿಸುವ ಮಾಸಿಕ ಬಾಡಿಗೆಯನ್ನು ಇಲಾಖೆಯಿಂದ ಪಾವತಿಸಲಾಗುವುದು.

ಆಸಕ್ತ ಕಟ್ಟಡ ಮಾಲೀಕರು ತಮ್ಮ ಕಟ್ಟಡದ ವಿವರಗಳೊಂದಿಗೆ ಒಪ್ಪಿಗೆ ಪತ್ರ ಮತ್ತು ಅರ್ಜಿಯನ್ನು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು(ಗ್ರೇಡ್–1), ಹೊಸಪೇಟೆ ಇವರಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಮೊ. 8105909630, 9535860275, 9880178179 ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಕ್ಕಳ ಶೈಕ್ಷಣಿಕ ಪ್ರವಾಸ

**ಮೊದಲಪುಟದಿಂದ**

ಸ್ನಾನದ ಕಿಟ್ ಸೇರಿದಂತೆ ಇತರೆ ಪರಿಕರಗಳನ್ನು ವಿತರಿಸಲಾಗುವುದು. ಒಟ್ಟು ನಾಲ್ಕು ದಿನಗಳ ಈ ಪ್ರವಾಸದಲ್ಲಿ ಚಿತ್ರದುರ್ಗ, ಬೇಲೂರು, ಹಳೆಬೀಡು, ಶ್ರವಣಬೆಳಗೊಳ, ತಲಕಾವೇರಿ, ಮಡಿಕೇರಿ, ಬೈಲುಕುಪ್ಪೆ, ಮೈಸೂರು, ಶ್ರೀರಂಗಪಟ್ಟಣದ ಪ್ರವಾಸಿ ತಾಣಗಳನ್ನು ಸಂದರ್ಶಿಸುವರು. ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮಕ್ಕೆ ವಿಜಯನಗರ ಜಿಲ್ಲೆಯಿಂದ ಪರಿಶಿಷ್ಟ ಜಾತಿಯ 376, ಪರಿಶಿಷ್ಟ ಪಂಗಡದ 365 ಸೇರಿದಂತೆ ಒಟ್ಟು 741 ಗುರಿಯನ್ನು ನಿಗದಿಪಡಿಸಲಾಗಿದೆ. ಅದರಂತೆ ಪ್ರವಾಸಕ್ಕೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ ಎಂದರು. ಈ ವೇಳೆ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಎಂ.ಚನ್ನಬಸಪ್ಪ ಸೇರಿದಂತೆ ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮದ ಅನುಷ್ಠಾನ ಸಂಸ್ಥೆಯಾದ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧಿಕಾರಿಗಳು, ಸಿಬ್ಬಂದಿಗಳು ಸೇರಿದಂತೆ ಶಿಕ್ಷಕರು ಭಾಗವಹಿಸಿದ್ದರು.

# ಫೆ.೦6ರಂದು ಕೌಶಲ್ಯ ಉದ್ಯೋಗಮೇಳ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ) ಹಾಗೂ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ ಮತ್ತು ಜಿಲ್ಲಾಕೌಶಲ್ಯ ಮಿಷನ್ ಇವರ ಸಂಯುಕ್ತಾಶ್ರಯದಲ್ಲಿ ಕೌಶಲ್ಯ ರೋಜ್‌ಗಾರ್ ಮತ್ತು ಉದ್ಯೋಗಮೇಳವನ್ನು ಫೆಬ್ರವರಿ 06ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 6 ರವರೆಗೆ ತಾಲೂಕು ಕ್ರೀಡಾಂಗಣದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ನಿರುದ್ಯೋಗಿ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಎಲ್ಲ ಪ್ರಮಾಣ ಪತ್ರಗಳೊಂದಿಗೆ ಭಾಗವಹಿಸಿ ಉದ್ಯೋಗದ ನೆರವು ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿ ಗಾಗಿ ಜಿಲ್ಲಾ ಕೌಶಲ್ಯ ಮಿಷನ್ ಕಛೇರಿ ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ


# ಹೋಬಳಿ ಹಂತದಲ್ಲೇ ಸಮಸ್ಯೆಗಳ ಇತ್ಯರ್ಥಕ್ಕೆ ಕ್ರಮ

## ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿಕೆ । ತಾಲೂಕು ಮಟ್ಟದ “ಜನ ಸ್ಪಂದನಾ” ಕಾರ್ಯಕ್ರಮ

■ **ಹಂಪಿ ಟೈಮ್ಸ್ ಕೊಪ್ಪಳ**

ಜನಸ್ಪಂದನಾ ಕಾರ್ಯಕ್ರಮಗಳ ಮೂಲಕ ಹೋಬಳಿ ಹಂತದಲ್ಲಿಯೇ ಜನರ ಸಮಸ್ಯೆಗಳನ್ನು ಇತ್ಯರ್ಥ ಪಡಿಸುವ ಪ್ರಯತ್ನವಾಗುತ್ತಿದೆ ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿದರು.

ಅವರು ಮಂಗಳವಾರ ಕೊಪ್ಪಳ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ವತಿಯಿಂದ ಯಲಬುರ್ಗಾ ತಾಲೂಕಿನ ಬೇವೂರು ಗ್ರಾಮದ ಬುದ್ಧ ಬಸವ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿದ್ದ ತಾಲ್ಲೂಕು ಮಟ್ಟದ “ಜನ ಸ್ಪಂದನಾ” ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸರ್ಕಾರದ ನಿರ್ದೇಶನದನ್ವಯ ಸಾರ್ವಜನಿಕರ ಸಮಸ್ಯೆಗಳಿಗೆ ತ್ವರಿತ ಪರಿಹಾರ, ಸಕಾಲದಲ್ಲಿ ಸೇವೆಗಳನ್ನು ಒದಗಿಸಲು ತಾಲ್ಲೂಕು ಮಟ್ಟದಲ್ಲಿ ಜನಸ್ಪಂದನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಈಗಾಗಲೇ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಈ ಕಾರ್ಯಕ್ರಮ ನಡೆಸಿ ಸಾರ್ವಜನಿಕರ ಕುಂದು ಕೊರತೆಗಳನ್ನು ಪರಿಹರಿಸಲು ಕ್ರಮ ವಹಿಸಲಾಗಿದೆ. ಪ್ರಸ್ತುತ ಹೋಬಳಿ ಮಟ್ಟದಲ್ಲಿಯೂ ಜನಸ್ಪಂದನಾ ಏರ್ಪಡಿಸಿ, ಅಲ್ಲಿನ ಗ್ರಾಮೀಣ ಜನರ ಸಮಸ್ಯೆಗಳನ್ನು ಆಲಿಸಿ, ಬಗೆಹರಿಸಲು ಕ್ರಮ ವಹಿಸಲಾಗುತ್ತಿದೆ. ಜಿಲ್ಲೆಯಲ್ಲಿ ಈ ವರೆಗೆ ಜರುಗಿದ ವಿವಿಧ ಜನಸ್ಪಂದನ ಕಾರ್ಯಕ್ರಮಗಳಲ್ಲಿ ಕುಂದುಕೊರತೆಗಳ ಅರ್ಜಿಗಳು ಹಾಗೂ ಮನವಿಗಳು ಸೇರಿ ಸ್ವೀಕೃತವಾದ ಒಟ್ಟು 2695 ಅರ್ಜಿಗಳಲ್ಲಿ 2683 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು, 12 ಅರ್ಜಿಗಳು ಮಾತ್ರ ಬಾಕಿ ಇರುತ್ತವೆ ಎಂದರು.




ರಾಜ್ಯ ಸರ್ಕಾರದ ಮಹತ್ವದ ಕಾರ್ಯಕ್ರಮಗಳಾದ ಐದು ಗ್ಯಾರಂಟಿ ಯೋಜನೆಗಳು ಕೊಪ್ಪಳ ಜಿಲ್ಲೆಯಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗುತ್ತಿದ್ದು, ಗೃಹಲಕ್ಷ್ಮೀ ಯೋಜನೆಯಡಿ ಸುಮಾರು 3 ಲಕ್ಷ 13 ಸಾವಿರ ಮಹಿಳೆಯರಿಗೆ ಮಾಸಿಕ ರೂ. 2 ಸಾವಿರಗಳ ಸಹಾಯಧನ ಸಿಗುತ್ತಿದೆ. 2 ಲಕ್ಷ 90 ಸಾವಿರ ಕುಟುಂಬಗಳು ಅನ್ನಭಾಗ್ಯ ಯೋಜನೆಯಡಿ ಸೌಲಭ್ಯ ಪಡೆದುಕೊಂಡಿದ್ದಾರೆ. ಗೃಹಜ್ಯೋತಿ ಯೋಜನೆಯು ಜಿಲ್ಲೆಯ 2 ಲಕ್ಷ 70 ಸಾವಿರಕ್ಕೂ ಅಧಿಕ ವಿದ್ಯುತ್ ಗ್ರಾಹಕರಲ್ಲಿ ಅನುಕೂಲವಾಗಿದೆ. ಪ್ರತಿ ತಿಂಗಳು ಸರಿ ಸುಮಾರು 33 ಲಕ್ಷ ಮಹಿಳೆಯರು ಉಚಿತ ಬಸ್ ಪ್ರಯಾಣದ ಸೌಲಭ್ಯವನ್ನು ಪಡೆದುಕೊಳ್ಳುತ್ತಿದ್ದಾರೆ. ಯುವನಿಧಿ ಯೋಜನೆಯಡಿ ಜಿಲ್ಲೆಯಲ್ಲಿ ಪದವಿ ಹಾಗೂ ಡಿಪ್ಲೋಮಾ ಪೂರ್ಣಗೊಳಿಸಿದ 3500 ಅಭ್ಯರ್ಥಿಗಳಿಗೆ ನಿರುದ್ಯೋಗ ಭತ್ಯೆಯನ್ನು ಪಾವತಿ ಮಾಡಲಾಗುತ್ತಿದೆ ಎಂದು ಹೇಳಿದರು.

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಈ ವರ್ಷ ನಮ್ಮ ಜಿಲ್ಲೆಗೆ 387 ಕೋಟಿ ಮಂಜೂರಾಗಿದ್ದು, ಯಲಬುರ್ಗಾಕ್ಕೆ 80 ರಿಂದ 100 ಕೋಟಿ ದೊರೆತಿದೆ. ಸರ್ಕಾರದಿಂದ ಕೆರೆ ತುಂಬಿಸುವ ಯೋಜನೆಗಾಗಿ ಯಲಬುರ್ಗಾ ಕ್ಷೇತ್ರಕ್ಕೆ 970 ಕೋಟಿ ಅನುದಾನ ಮಂಜೂರಾಗಿದೆ. ಇದಲ್ಲದೆ ಕಲ್ಯಾಣ ಕರ್ನಾಟಕ ಉತ್ಸವ ದಿನದಂದು ಕಲಬುರಗಿಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಜಿಲ್ಲೆಗೆ ಮೂರು ತಾಲ್ಲೂಕು ಅಸ್ಪತ್ರೆ, 8 ಪ್ರಾರ್ಥಮಿಕ ಆರೋಗ್ಯ ಕೇಂದ್ರಗಳು, 3 ಸಮುದಾಯ ಆರೋಗ್ಯ ಕೇಂದ್ರಗಳು ಮಂಜೂರಾಗಿವೆ ಮತ್ತು ಕೆಲ ಆಸ್ಪತ್ರೆಗಳನ್ನು ಮೇಲ್ದರ್ಜೆಗೆರಿಸಲು ಮಂಜೂರಾತಿ ನೀಡಲಾಗಿದೆ. ಯಲಬುರ್ಗಾ ಕ್ಷೇತ್ರಕ್ಕೆ 4 ಪಿ.ಹೆಚ್.ಸಿ., ಸಿ.ಹೆಚ್.ಸಿ ಮತ್ತು 100 ಹಾಸಿಗೆಯ ಆಸ್ಪತ್ರೆ ದೊರೆತಿದೆ. ಇದರ ಜೊತೆಗೆ 8 ಪ್ರೌಢ ಶಾಲೆಗಳ ಉನ್ನತಿಕರಣ ಹಾಗೂ ವಸತಿ ಶಾಲೆಗಳು ಮಂಜೂರಾಗಿವೆ ಎಂದರು.

ಕಾರ್ಯಕ್ರಮದಲ್ಲಿ ಬೇವೂರ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಅಂದಮ್ಮ ಬಳಿಗಾರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮ್ ಎಲ್ ಅರಸಿದ್ದಿ, ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಗ್ರಾ.ಪಂ ಉಪಾಧ್ಯಕ್ಷರಾದ ಲಕ್ಷ್ಮವ್ವ ಚುಕ್ಕಾಣಿ, ಯಲಬುರ್ಗಾ ತಹಸೀಲ್ದಾರ ಬಸವರಾಜ ತನ್ನಳ್ಳಿ, ಉಪ ತಹಶಿಲ್ದಾರ ವಿಜಯಕುಮಾರ ಗುಡದೂರ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ರಥಸಪ್ತಮಿ



ಮಾಘ ಮಾಸದ ಶುಕ್ಲ ಪಕ್ಷದ ಸಪ್ತಮಿ ತಿಥಿಯನ್ನು ರಥಸಪ್ತಮಿ ಎಂದು ಕರೆಯುತ್ತಾರೆ. ಕಶ್ಯಪ ಋಷಿ ಹಾಗೂ ಅದಿತಿ ದೇವಿ ದಂಪತಿಗಳಿಗೆ ಜನಿಸಿದ ಮಗುವೇ ಸೂರ್ಯದೇವ. ಈ ದಿನವನ್ನು ಆರೋಗ್ಯ ಸಪ್ತಮಿ ಅಚಲ ಸಪ್ತಮಿ ಎಂದು ಕರೆಯಲಾಗುತ್ತದೆ.

ಈ ಜಗತ್ತು ಕತ್ತಲಲ್ಲಿ ಮುಳುಗಿದ ಸಂದರ್ಭದಲ್ಲಿ ಪರಶಿವನು ಸೂರ್ಯನನ್ನು ಸೃಷ್ಟಿಸಿದನಂತೆ. ಮಹ ವಿಷ್ಣುವಿನ ಶಕ್ತಿಗಳ ಸಂಚಯ ರೂಪವೇ ಸೂರ್ಯದೇವ. ಜಗತ್ತು ಉದಯವಾಗಿದ್ದು ಸೂರ್ಯನ ಬೆಳಕಿನಿಂದ. ಸೂರ್ಯನು ಉದಯಿಸದೆ ಹೋದರೆ ಜಗತ್ತೇ ಕತ್ತಲಿನ ಕೂಪದಲ್ಲಿ ಮುಳಗಿ ಹೋಗುತ್ತದೆ. ಸಕಲ ಚರಾಚರ ಜೀವಿಗಳ ಆರೋಗ್ಯವನ್ನು ಸೂರ್ಯದೇವನೇ ಕಾಪಾಡುತ್ತಾನೆ. ಅವನಿಗೆ ಗ್ರಹಣ ಹಿಡಿದರೆ ಜಗತ್ತೇ ರೋಗದ ಭೀತಿಯಿಂದ ತತ್ತರಿಸಿ ಹೋಗುತ್ತದೆ.

ಚಳಿಗಾಲದಲ್ಲಿ ಮುದುಡಿ ಹೋಗಿದ್ದ ಶರೀರ ರಥಸಪ್ತಮಿಯ ಬಳಿಕ ಸೂರ್ಯನ ಶಾಖದಿಂದ ನವ ಚೈತನ್ಯ ತುಂಬಿಕೊಳ್ಳುತ್ತದೆ. "ಆರೋಗ್ಯ ಭಾಸ್ಕರಾದಿಚ್ಛೇತ್"ಎಂದರೆ ಸೂರ್ಯ ಆರೋಗ್ಯದಾಯಿ. ಇದು ವೈಜ್ಞಾನಿಕವಾಗಿಯೂ ಸಾಬೀತಾಗಿದೆ. ಹುಟ್ಟಿದ ಎಳೆ ಮಕ್ಕಳ ಕಣ್ಣುಗಳು ಹಳದಿ ಬಣ್ಣಕ್ಕೆ ತಿರುಗಿದ ಸಂದರ್ಭದಲ್ಲಿ ಆ ಮಗುವನ್ನು ಪ್ರತಿದಿನ ಎಳೆ ಬಿಸಿಲಿಗೆ ಹಿಡಿಯುವಂತೆ ವೈದ್ಯರು ಸಲಹೆಯನ್ನು ನೀಡುತ್ತಾರೆ. ಸೂರ್ಯನ ಕಿರಣದಲ್ಲಿ ವಿಟಮಿನ್ "ಡಿ" ಹೇರಳವಾಗಿರುತ್ತದೆ.



ಚೇತನ ಭಾರ್ಗವ
ಬೆಂಗಳೂರು ಹವ್ಯಾಸಿ ಬರಹಗಾರ್ತಿ


Scan For Digital Colourful
HAMPI TIMES E-paper


ಸೂರ್ಯನ ಕಿರಣಗಳಿಗೆ ರೋಗವನ್ನು ನಿವಾರಣೆ ಮಾಡುವ, ಆರೋಗ್ಯವನ್ನು ವೃದ್ಧಿಸುವ, ರೋಗಾಣುಗಳನ್ನು ನಾಶಪಡಿಸುವ ಶಕ್ತಿ ಇದೆ. ಬೆಳಗಿನ ಹಾಗೂ ಸಂಜೆಯ ಸೂರ್ಯನ ಕಿರಣಗಳು ಆರೋಗ್ಯಕ್ಕೆ ಉತ್ತಮವಾಗಿರುತ್ತದೆ. ಆದ್ದರಿಂದ ಸೂರ್ಯನಿಗೆ ವಿಶೇಷವಾದ ಪೂಜೆಯನ್ನು ಮಾಡಲಾಗುತ್ತದೆ.

ಮಾಘ ಮಾಸದ ಶುಕ್ಲ ಪಕ್ಷದ ಸಪ್ತಮಿ ತಿಥಿಯಂದು ಸೂರ್ಯನ ಜನ್ಮದಿನ ಹಾಗೂ ಹಲವು ದೇವಸ್ಥಾನಗಳಲ್ಲಿ ಇಂದು ರಥೋತ್ಸವಗಳು ನಡೆಯುತ್ತದೆ. ಆದ್ದರಿಂದ ಈ ದಿನವನ್ನು ರಥಸಪ್ತಮಿ ಎಂದು ಹೇಳಲಾಗುತ್ತದೆ. ಈ ದಿನ ಸೂರ್ಯದೇವನನ್ನು ಪೂಜಿಸಿದರೆ ಆರೋಗ್ಯ, ಆಯಸ್ಸು ,ಸಂಪತ್ತು ಸಂತೋಷ ಹಾಗೂ ಜ್ಞಾನ ಶಕ್ತಿಗಳು ವೃತ್ತಿಯಾಗುತ್ತದೆ ಎಂಬ ನಂಬಿಕೆ ಇದೆ.

ಸಪ್ತ ಕುದುರೆಗಳ ರಥವನ್ನೇರಿ ಸೂರ್ಯ ತನ್ನ ಪಥವನ್ನು ಉತ್ತರ ಗೋಳಾರ್ಧ ತಿರುಗುವ ಮೂಲಕ ಈಶಾನ್ಯ ಮಾರ್ಗದಲ್ಲಿ ಚಲಿಸುವ ಪರ್ವವೇ ರಥಸಪ್ತಮಿಯ ವಿಶೇಷ. ಇಂದಿನಿಂದ ಹಗಲು ಹೆಚ್ಚಾಗಿರುತ್ತದೆ. ಸೂರ್ಯನು ಏಳು ಕುದುರೆಗಳ 12 ಚಕ್ರವುಳ್ಳ ರಥದಲ್ಲಿ ಚಲಿಸುತ್ತಿರುತ್ತಾನೆ. ಅವನಿಗೆ ಅರುಣನು ಸಾರಥಿ ಆಗಿರುತ್ತಾನೆ. ಈ 12 ಚಕ್ರಗಳು ರಾಶಿಯನ್ನು ಸೂಚಿಸಿದರೆ ಏಳು ಕುದುರೆಗಳು ಏಳು ದಿನಗಳನ್ನು ಪ್ರತಿನಿಧಿಸುತ್ತದೆ.

ಈ ದಿನವು ಸೂರ್ಯನು ತನ್ನ ಹಳೆಯ ರಥವನ್ನು ಬಿಟ್ಟು ಹೊಸ ರಥವನ್ನು ಹತ್ತುವ ಮೂಲಕ ಜೀವಿಗಳಿಗೆ ಹೊಸ ಚೈತನ್ಯವನ್ನು ನೀಡುತ್ತಾನೆ ಹಾಗಾಗಿ ಈ ದಿನದಂದು ಅವನಿಗೆ ಗೌರವ ಸಲ್ಲಿಸುವ ಸಲುವಾಗಿ ದೇಶಾದ್ಯಂತ ರಥಸಪ್ತಮಿಯನ್ನು ಆಚರಿಸಲಾಗುತ್ತದೆ.

ಪುರಾಣದ ಪ್ರಕಾರ ದ್ವಾಪರ ಯುಗದಲ್ಲಿ ಪಾಂಡವರ ಅಜ್ಞಾತವಾಸದ ಸಮಯದಲ್ಲಿ ಶ್ರೀ ಕೃಷ್ಣನು ಅವರಿಗೆ ರಥಸಪ್ತಮಿ ಬಗ್ಗೆ ತಿಳಿಸಿ ದ್ರೌಪದಿಯು ಶ್ರದ್ಧಾಭಕ್ತಿಯಿಂದ ಸೂರ್ಯರಾಧನೆ ಮಾಡಿದ ಪರಿಣಾಮವಾಗಿಯೇ ಸೂರ್ಯನಿಂದ ಅಕ್ಷಯಪಾತ್ರೆಯನ್ನು ಪಡೆದು ದಟ್ಟಾರಣ್ಯದಲ್ಲೂ ಮೃಷ್ಟಾನ್ನ ಭೋಜನವನ್ನು ಮಾಡುತ್ತಿದ್ದರು ಎಂದು ಹೇಳಲಾಗುತ್ತದೆ. ಅದೇ ರೀತಿ ಯಶೋವರ್ಮನೆಂಬ ರಾಜನಿಗೆ ಜನಿಸಿದ ಮಗುವು ಹುಟ್ಟಿನಿಂದಲೇ ಕಾಯಿಲೆಗೆ ತುತ್ತಾಗಿತ್ತು. ಕುಲ ಪುರೋಹಿತರ ಬಳಿ ಇದಕ್ಕೆ ಪರಿಹಾರ ಕೇಳಿದಾಗ ರಥಸಪ್ತಮಿ ವ್ರತವನ್ನು ಆಚರಿಸಿದರೆ ಈ ರೋಗವು ಪರಿಹಾರವಾಗುತ್ತದೆ ಎಂದು ಸೂಚಿಸಿದರು. ಅದರ ಪ್ರಕಾರವಾಗಿ ರಥಸಪ್ತಮಿ ಎಂದು ಸೂರ್ಯರಾದನೆ ಮಾಡಿದ ನಂತರ ಮಗು ಆರೋಗ್ಯವಂತನಾದನು ಎಂಬ ದೃಷ್ಟಾಂತ ಕಥೆ ಇದೆ.

ರಾಮ ರಾವಣರ ಯುದ್ಧದ ಸಂದರ್ಭದಲ್ಲಿ ಅಗಸ್ತ್ಯ ಮಹರ್ಷಿಗಳ ಉಪದೇಶದಂತೆ ಶ್ರೀರಾಮಚಂದ್ರನೂ ಕೂಡ ಆದಿತ್ಯ ಹೃದಯದ ಮೂಲಕ ಸೂರ್ಯದೇವನನ್ನು ಉಪಾಸನೆ ಮಾಡಿದ್ದಾನೆ ಎಂದು ರಾಮಾಯಣದಲ್ಲಿ ಉಲ್ಲೇಖವಿದೆ. ಸೂರ್ಯರಾಧನೆ ಮಾಡಿ ಚಿನ್ನ ನೀಡುವ ಶಮಂತಕಮಣಿಯನ್ನು ಸತ್ರಜಿತ್ ಪಡೆದ ಎಂಬ ಕಥೆಯನ್ನು ಹರಿವಂಶದಲ್ಲಿ ಹೇಳಲಾಗುತ್ತದೆ.

ಶ್ರೀರಾಮ ಸೂರ್ಯವಂಶದವನಾದರೆ ಕರ್ಣ ಸುಗ್ರೀವ ಶನಿ ಹಾಗೂ ಯಮ ಸೂರ್ಯನ ಪುತ್ರರು.

ಈ ದಿನದ ಸೂರ್ಯೋದಯಕ್ಕೆ ಸರಿಯಾಗಿ ನದಿಗಳಲ್ಲಿ ಸಮುದ್ರದಲ್ಲಿ ಸರೋವರಗಳಲ್ಲಿ ಸ್ನಾನ ಮಾಡಿ ಸೂರ್ಯನಿಗೆ ಅರ್ಘ್ಯ ನೀಡುತ್ತಾರೆ. ಸೂರ್ಯನ ಕಿರಣಗಳ ಸತ್ವವನ್ನು ಹೀರಿ ಕೊಂಡಿರುವ ಎಕ್ಕದ ಎಲೆಯನ್ನು ದೇಹದ ವಿವಿಧ ಭಾಗಗಳಲ್ಲಿ ಇರಿಸಿ ಸ್ನಾನ ಮಾಡುವುದು ರಥಸಪ್ತಮಿಯ ವಿಶೇಷ ಆಚರಣೆ.ಎಕ್ಕದ ಎಲೆಯು ಔಷಧೀಯ ಅಂಶಗಳನ್ನು ಒಳಗೊಂಡಿರುತ್ತದೆ. ಈ ದಿನದಂದು ಆದಿತ್ಯ ಹೃದಯ ಸ್ತೋತ್ರವನ್ನು ಪಠಿಸುವ ಮೂಲಕ ಸೂರ್ಯದೇವನನ್ನು ಆರಾಧಿಸಲಾಗುತ್ತದೆ.

**ಜಯತು ಜಯತು ಸೂರ್ಯ ಸಪ್ತಲೋಕೈಕ ದೀಪಂ**
**ಕಿರಣ ಶಮಿತಾ ಪಾಪಂ ಕ್ಲೇಶ ದುಃಖಸ್ಯ ನಾಶಮ್!**
**ಅರುಣ ನಿಗಮಗಮ್ಯ ಚಾದಿಮಾದಿತ್ಯ ಮೂರ್ತಿಂ**
**ಸಕಲ ಭುವನ ಮಧ್ಯಂ ಭಾಸ್ಕರಂ ತಂ ನಮಾಮಿ!!**